# ವಿವರಣೆ ಹಾಗೂ ಮಾರಾಟ ಸಾಹಿತ್ಯ

**ವಿಭಾಗ 1. ವಯೋಮಿತಿ**

1. **ಪ್ರವೇಶ ವಯಸ್ಸು:** ಈ ಪಾಲಿಸಿಯನ್ನು ಕನಿಷ್ಠ 6 ವರ್ಷ ವಯಸ್ಸಿನ ವ್ಯಕ್ತಿಗೆ ನೀಡಬಹುದು. ಗರಿಷ್ಠ ಪ್ರವೇಶ ವಯಸ್ಸು 125 ವರ್ಷಗಳವರೆಗೆ ಇರುತ್ತದೆ. 91 ದಿನಗಳಿಂದ 5 ವರ್ಷದವರೆಗಿನ ಮಕ್ಕಳು ಫ್ಲೋಟರ್ ಯೋಜನೆಯಡಿ ಮಾತ್ರ ವಿಮೆ ಪಡೆಯಬಹುದು. ಫ್ಲೋಟರ್ ಪಾಲಿಸಿಯ ಅಡಿ ಅವಲಂಬಿತ ಮಕ್ಕಳ ಗರಿಷ್ಠ ವಯೋಮಿತಿ 30 ವರ್ಷಗಳು. ಕಳೆದ ಜನ್ಮದಿನದಂದು ಪೂರೈಸಿದ ವರ್ಷಗಳನ್ನು ಪರಿಗಣಿಸಲಾಗುತ್ತದೆ.
2. **ಆಜೀವ ನವೀಕರಣ:** ನವೀಕರಣಕ್ಕೆ ಯಾವುದೇ ಗರಿಷ್ಠ ವಯೋಮಿತಿ ಇಲ್ಲ.
3. **ಫ್ಲೋಟರ್ ಪಾಲಿಸಿ:** ನೀವು ಫ್ಲೋಟರ್ ಸುರಕ್ಷೆಯನ್ನು ನಿಮ್ಮದಾಗಿಸಿಕೊಳ್ಳಬಹುದು ಹಾಗೂ ಅದೇ ಮೊತ್ತದಲ್ಲಿ ಒಂದೇ ಪಾಲಿಸಿಯಡಿ ನಿಮ್ಮ ಹತ್ತಿರದ ಸಂಬಂಧಿಗಳ ಸುರಕ್ಷತೆಯನ್ನೂ ಒಂದೇ ಪ್ರೀಮಿಯಂ ಹಣ ಪಾವತಿಸುವ ಮೂಲಕ ಪಡೆದುಕೊಳ್ಳಬಹುದು. ಈ ಪಾಲಿಸಿಯಡಿ 3 ತಿಂಗಳು ಮೇಲ್ಪಟ್ಟ ಯಾವುದೇ ವ್ಯಕ್ತಿಯಾಗಲೀ ಒಬ್ಬ ವಯಸ್ಕರಾಗಲೀ ಸುರಕ್ಷೆ ಪಡೆಯಬಹುದು.
4. **ಸುರಕ್ಷೆಗೊಳಪಡುವ ಸಂಬಂಧಗಳು:** ನೀವು ಹಾಗೂ ನಿಮ್ಮ ಹತ್ತಿರದ ಸಂಬಂಧಿಗಳು (ಹತ್ತಿರದ ಸಂಬಂಧಿಗಳು ಎಂದರೆ ನಿಮ್ಮ ಸಂಗಾತಿ, ಅವಲಂಬಿತರಾಗಿರುವ ಮಕ್ಕಳು, ಸಹೋದರ(ರು), ಸಹೋದರಿ(ಯರು) ಹಾಗೂ ಅವಲಂಬಿತರಾದ ಪೋಷಕ(ರು), ಅಜ್ಜ-ಅಜ್ಜಿಯರು, ಅತ್ತೆ, ಮಾವ, ಅಳಿಯ ಹಾಗೂ ಸೊಸೆ. ವಿಮೆ ಆಸಕ್ತಿ ಹೊಂದಿರುವ ವ್ಯಕ್ತಿ/ಘಟಕಗಳು ಸಹ ಇತರ ವ್ಯಕ್ತಿಗಳಿಗಾಗಿ ಪಾಲಿಸಿಯನ್ನು ಖರೀದಿಸಬಹುದು, ಉದಾ.- ಉದ್ಯೋಗಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗೆ ಉದ್ಯೋಗದಾತನು ವಿಮೆ ಸುರಕ್ಷತೆ ಪಡೆದುಕೊಳ್ಳಬಹುದು.
5. **ಪ್ರೀಮಿಯಂ ಲೆಕ್ಕಾಚಾರ:** ಫ್ಯಾಮಿಲಿ ಫ್ಲೋಟರ್ ಪಾಲಿಸಿಯಲ್ಲಿ, ಸುರಕ್ಷೆಗೊಳಪಡುವ ಕುಟುಂಬ ಸದಸ್ಯರ ಪ್ರೀಮಿಯಂ ಮೊತ್ತವನ್ನು ಲೆಕ್ಕ ಹಾಕಲು ಕುಟುಂಬದ ಅತ್ಯಂತ ಹಿರಿಯ ಸಮಸ್ಯರ ವಯಸ್ಸನ್ನು ಪರಿಗಣಿಸಲಾಗುವುದು. ಪ್ರೀಮಿಯಂ ನಿರ್ಧರಿಸುವ ಇತರ ಅಂಶಗಳೆಂದರೆ, ಯಾವುದೇ ಐಚ್ಛಿಕ ಸುರಕ್ಷೆಗಳ ಸೇರ್ಪಡೆ/ರದ್ದುಗೊಳಿಸುವಿಕೆ, ಅವಧಿ, ಆಯ್ಕೆ ಮಾಡಿಕೊಂಡ ವಲಯ, ವಿಮಾ ಮೊತ್ತದಲ್ಲಿ ಏರಿಕೆ ಅಥವಾ ಇಳಿಕೆ ಹಾಗೂ ತೆರಿಗೆ ಕಾನೂನುಗಳಲ್ಲಿ ಸರ್ಕಾರ ಯಾವುದೇ ಬದಲಾವಣೆ ತಂದಲ್ಲಿ ಹಾಗೂ ವಿಮಾದಾರರ ಆರೋಗ್ಯ ಸ್ಥಿತಿ ಇವುಗಳಲ್ಲಿನ ಬದಲಾವಣೆ
6. ವಿಶ್ವದಾದ್ಯಂತ ಸುರಕ್ಷೆ ಒದಗಿಸುವ ಪಾಲಿಸಿಯನ್ನು 65 ವರ್ಷ ಮೇಲ್ಪಟ್ಟಿದ್ದು ಭಾರತದ ಶಾಶ್ವತ ನಾಗರಿಕರಾಗಿದ್ದವರಿಗೆ ಹಾಗೂ ಪಾಲಿಸಿ ಪಡೆಯುವಾಗ ಭಾರತದಲ್ಲಿ ವಾಸಿಸುತ್ತಿದ್ದವರಿಗೆ ಮಾತ್ರ ನೀಡಲಾಗುತ್ತದೆ.

**ವಿಭಾಗ 2. ಪ್ರಮುಖ ಲಕ್ಷಣಗಳು ಹಾಗೂ ಪ್ರಯೋಜನಗಳು:**

1. **ಪಾಲಿಸಿ ಅವಧಿ:** 1 ವರ್ಷ ಅಥವಾ 2 ವರ್ಷ ಅಥವಾ 3 ವರ್ಷಗಳ ಅವಧಿ ಹೊಂದಿರುವ ಪಾಲಿಸಿಯನ್ನು ನೀವು ಆರಿಸಿಕೊಳ್ಳಬಹುದು.
2. **ತೆರಿಗೆ ಪ್ರಯೋಜನ:** ಆದಾಯ ತೆರಿಗೆ ಕಾಯ್ದೆ 1961 ಹಾಗೂ ನಂತರದ ತಿದ್ದುಪಡಿಗಳ ವಿಧಿ 80ಡಿ ಅನ್ವಯ ನೀವು ಈ ಪಾಲಿಸಿಯ ಆರೋಗ್ಯ ವಿಭಾಗದಡಿ ಪಾವತಿಸಿದ ಪ್ರೀಮಿಯಂ ಮೇಲೆ ತೆರಿಗೆ ಪ್ರಯೋಜನ ಪಡೆಯಬಹುದು.
3. **ವಾರ್ಷಿಕ ವಿಮಾ ಮೊತ್ತ:** ಒಂದು ವರ್ಷದ ಪಾಲಿಸಿ ಅವಧಿಯಲ್ಲಿ ಲಭ್ಯವಿರುವ ಗರಿಷ್ಠ ವಿಮಾ ಮೊತ್ತ ಎಂಬುದು ಇದರ ಅರ್ಥ. ಕನಿಷ್ಠ ವಿಮಾ ಮೊತ್ತ: ₹5,0 0,000 ಗರಿಷ್ಠ ವಿಮಾ ಮೊತ: ಅನಿಯಮಿತ
4. **ನಗದುರಹಿತ ಆಸ್ಪತ್ರೀಕರಣ:** ನಮ್ಮ ಯಾವುದೇ ನೆಟ್ವರ್ಕ್ ಪೂರೈಕೆದಾರರು/ಆಸ್ಪತ್ರೆಗಳಲ್ಲಿ ನೀವು ನಗದುರಹಿತ ಆಸ್ಪತ್ರೀಕರಣ ಸೌಲಭ್ಯ ಪಡೆಯಬಹುದು.
5. **ವಲಯ ಆಧಾರಿತ ಪ್ರೀಮಿಯಂ:** ಪ್ರಸ್ತಾವನಾ ಅರ್ಜಿಯಲ್ಲಿ ನೀವು ಆರಿಸಿಕೊಂಡ ವಲಯವನ್ನು ಆಧರಿಸಿ ಪ್ರೀಮಿಯಂ ಲೆಕ್ಕ ಹಾಕಲಾಗುತ್ತದೆ.

| ವಲಯ | ರಾಜ್ಯ/ಜಿಲ್ಲೆ |
|---|---|
| ವಲಯ ಎ | ದೆಹಲಿ, ಮುಂಬೈ (ಥಾಣೆ ಹಾಗೂ ನವಿ ಮುಂಬೈ ಸೇರಿ), ಗುರುಗ್ರಾಂ ಜಿಲ್ಲೆ ಕರ್ನಲ್ ಜಿಲ್ಲೆ ಸೋಣಿಪತ್ ಜಿಲ್ಲೆ ರೊಹ್ಟಕ್ ಜಿಲ್ಲೆ ಭಿವಾನಿ ಜಿಲ್ಲೆ, ಚಕ್ರಿದಾದ್ರಿ ಜಿಲ್ಲೆ, ಮಹೇಂದ್ರಗಢ ಜಿಲ್ಲೆ, ದಮನ್ & ದಿಯು, ದಾದ್ರಾ ನಗರ್, ಅಹ್ಮದಾಬಾದ್, ಸೂರತ್, ನೋಯ್ಡಾ ನಗರ, ಗಾಜಿಯಾಬಾದ್ ಜಿಲ್ಲೆ ಹಾಪುರ್ ಜಿಲ್ಲೆ ಮೀರತ್ ಜಿಲ್ಲೆ ಮುಜಾಫರನಗರ್ ಜಿಲ್ಲೆ, ಶಾಮಲಿ ಜಿಲ್ಲೆ |
| ವಲಯ್ ಬಿ | ಪುಣೆ, ಕೋಲ್ಕತ್ತಾ, ತೆಲಂಗಾಣ (ಹೈದರಾಬಾದ್ ಸೇರಿ), ಮಧ್ಯಪ್ರದೇಶ, ಗೋವಾ, ಗುಜರಾತ್ (ಅಹಮದಾಬಾದ್ ಮತ್ತು ಸೂರತ್ ಹೊರತುಪಡಿಸಿ), ಬೆಂಗಳೂರು, ಚೆನ್ನೈ, ಆಂಧ್ರಪ್ರದೇಶ, ಚತ್ತೀಸ್ಗಢ, ಪಾಂಡಿಚೆರಿ, ಉತ್ತರಾಖಂಡ |
| ವಲಯ ಸಿ | ಭಾರತದ ಉಳಿದ ಭಾಗ (ಪಂಜಾಬ್, ರಾಜಸ್ಥಾನ (ಎನ್.ಸಿ.ಆರ್ ಪ್ರದೇಶ ಹೊರತುಪಡಿಸಿ), ಚಂಡೀಗಢ, ಹಿಮಾಚಲಪ್ರದೇಶ, ಜಮ್ಮು & ಕಾಶ್ಮೀರ, ಲಡಾಖ್, ಲಕ್ಷದ್ವೀಪ, ಕೇರಳ, ತಮಿಳುನಾಡು (ಚೆನ್ನೈ, ಪಾಂಡಿಚೆರಿ ಹೊರತುಪಡಿಸಿ), ಒರಿಸ್ಸಾ, ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ, ಸಿಕ್ಕಿಂ, ಅಂಡಮಾನ್ & ನಿಕೋಬಾರ್, ಕರ್ನಾಟಕದ ಉಳಿದ ಭಾಗ, ಪಶ್ಚಿಮ ಬಂಗಾಳ (ಕೋಲ್ಕತಾ ಹೊರತುಪಡಿಸಿ), ಬಿಹಾರ, ಜಾರ್ಖಂಡ್, ಮಹಾರಾಷ್ಟ್ರ (ಎನ್,ಸಿ.ಆರ್ ಪ್ರದೇಶ ಹೊರತುಪಡಿಸಿ), ಹರಿಯಾಣ (ಎನ್,ಸಿ.ಆರ್ ಪ್ರದೇಶ ಹೊರತುಪಡಿಸಿ) |
| ವಲಯ ಡಿ | ಉಳಿದ ಎನ್‌ಸಿಆರ್ (ಆಳ್ವಾರ್ ಜಿಲ್ಲೆ, ಬಾಗ್ಪತ್ ಜಿಲ್ಲೆ ಭರತಪುರ್ ಜಿಲ್ಲೆ, ಬುಲಂದ್ ಶಹರ್ ಜಿಲ್ಲೆ, ಫರಿದಾಬಾದ್ ಜಿಲ್ಲೆ, ನೋಯ್ಡಾ ಹೊರತುಪಡಿಸಿ ಗೌತಮ ಬುದ್ಧ ನಗರ ಜಿಲ್ಲೆ, ಝೂಜ್ಜರ್ ಜಿಲ್ಲೆ, ಜಿಂದ್ ಜಿಲ್ಲೆ, ನೂಹ್ ಜಿಲ್ಲೆ, ಪಾಣಿಪತ್ ಜಿಲ್ಲೆ, ರೇವಾರಿ ಜಿಲ್ಲೆ, ಮೇವತ್ ಜಿಲ್ಲೆ, ಪಲ್ವಾಲ್ ಜಿಲ್ಲೆ) |

ಪ್ರೀಮಿಯಂ ಮೊತ್ತವು ನೀವು ವಾಸಿಸುವ ನಗರ ಹಾಗೂ ಪಿನ್ ಕೋಡ್ ಆಧರಿತವಾಗಿರುತ್ತದೆ. ಇವುಗಳ ಬದಲಾವಣೆ ಇದ್ದಲ್ಲಿ ನಮಗೆ ದಯವಿಟ್ಟು ತಕ್ಷಣ ತಿಳಿಸಿ. ತಪ್ಪಿದಲ್ಲಿ ನಿಮ್ಮ ಕ್ಲೇಮಿನ ಸ್ವೀಕಾರಾರ್ಹತೆಯ ಮೇಲೆ ಪರಿಣಾಮ ಉಂಟಾಗಬಹುದು. ವಲಯ ಆಧಾರಿತ ಸಹ-ಪಾವತಿ ಅನ್ವಯಿಸುವುದಿಲ್ಲ.

6. ಪಾಲಿಸಿಗೆ ಮುನ್ನ ವೈದ್ಯಕೀಯ ತಪಾಸಣೆ: ವಾರ್ಷಿಕ ವಿಮಾ ಮೊತ್ತ ರೂ. 10 ಲಕ್ಷಗಳವರೆಗೆ ಇದ್ದು 45 ವರ್ಷಗಳಿಗಿಂತ ಕಡಿಮೆ ವಯಸ್ಸಿನವರಾಗಿದ್ದಲ್ಲಿ ವೈದ್ಯಕೀಯ ತಪಾಸಣೆಯ ಅಗತ್ಯ ಇರುವುದಿಲ್ಲ. ನೀವು 45 ವರ್ಷ ಅಥವಾ ಹೆಚ್ಚಿನ ವಯಸ್ಸಿನವಾಗಿದ್ದಾಗ* ಪಾಲಿಸಿಗಾಗಿ ನಮ್ಮನ್ನು ಸಂಪರ್ಕಿಸಿದರೆ, ನಮ್ಮ ಗುರುತಿನ ಡಯಾಗ್ನೋಸ್ಟಿಕ್ ಸೆಂಟರ್ ನಲ್ಲಿ ನೀವು ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ. ವಿಮೆ ಒದಗಿಸಲು ನಮಗೆ ಒಪ್ಪಿಗೆಯಾದಲ್ಲಿ, ಪಾಲಿಸಿಗೆ ಮುನ್ನ ಮಾಡಿಸಿದ ವೈದ್ಯಕೀಯ ತಪಾಸಣೆಯ ಕನಿಷ್ಠ ಶೇ.50ರಷ್ಟು ಖರ್ಚನ್ನು ನಿಮಗೆ ಮರುಪಾವತಿಸುತ್ತೇವೆ. *ವೈದ್ಯಕೀಯ ಖಾತರಿದಾರರ ತೀರ್ಮಾನವನ್ನು

ಆಧರಿಸಿ ಕೆಲವು ನಿರ್ದಿಷ್ಟ ಚಾನಲ್ ಅಥವಾ ಯೋಜನೆಗಳಿಗೆ ವಯೋಮಿತಿ ಸಡಿಲಿಕೆ ನೀಡಲಾಗುವುದು.

**ಏನೇನು ಸುರಕ್ಷಿತ?**

ಪಾಲಿಸಿ ಅವಧಿಯಲ್ಲಿ ಯಾವುದೇ ಅನಾರೋಗ್ಯ ಅಥವಾ ಗಾಯಗೊಂಡ ಕಾರಣಕ್ಕೆ ನೀವು ಆಸ್ಪತ್ರೀಕರಣಗೊಂಡಲ್ಲಿ ತಗಲುವ ವೈದ್ಯಕೀಯ ವೆಚ್ಚವನ್ನು ಈ ಪಾಲಿಸಿಯ ಅಡಿ ತುಂಬಿಕೊಡಲಾಗುವುದು.

## A. ಮೂಲ ಸುರಕ್ಷತೆ

ಈ ಮೂಲ ಸುರಕ್ಷೆಯಡಿ ಪಾವತಿಯು ನಷ್ಟ ಪರಿಹಾರದ ಗರಿಷ್ಠ ಮಿತಿಯೊಳಗಿರಬೇಕು.

1. **ಒಳರೋಗಿ ಚಿಕಿತ್ಸೆ:** ಸಿಂಗಲ್ ಪ್ರೈವೇಟ್ ಎಸಿ ರೂಂವರೆಗೆ ಕೊಠಡಿ ಬಾಡಿಗೆ, ತೀವ್ರ ನಿಗಾ ಘಟಕದ ವೆಚ್ಚ, ಪರಿಣತ ಶುಶ್ರೂಶಕರ ವೆಚ್ಚ, ವೈದ್ಯರ ಶುಲ್ಕ, ಅರವಳಿಕೆ, ರಕ್ತ, ಆಮ್ಲಜನಕ, ಶಸ್ತ್ರಚಿಕಿತ್ಸಾ ಕೊಠಡಿ ವೆಚ್ಚ, ಔಷಧಗಳಿಗೆ ತಗಲುವ ವೆಚ್ಚ, ಬಳಕೆಯ ವಸ್ತುಗಳು, ಶಸ್ತ್ರಚಿಕಿತ್ಸಾ ಸಲಕರಣೆಗಳು ಹಾಗೂ ಕೃತಕ ಸಾಧನಗಳು (ಬರಹರೂಪದಲ್ಲಿಯ ಶಿಫಾರಸ್ಸು), ತಪಾಸಣೆ ಅಥವಾ ಪರೀಕ್ಷೆಗಳಿಗೆ ತಗಲುವ್ ವೆಚ್ಚ ಇತ್ಯಾದಿ ವೆಚ್ಚಗಳನ್ನು ನೀವು ಕನಿಷ್ಠ 24 ಗಂಟೆಗಳ ಕಾಲ ಒಳರೋಗಿಯಾಗಿ ಆಸ್ಪತ್ರೆಗೆ ದಾಖಲಾದಲ್ಲಿ ನಾವು ಭರಿಸುತ್ತೇವೆ.
    i. ಒಂದು ವೇಳೆ ನೀವು ಪಾಲಿಸಿ ಶೆಡ್ಯೂಲ್ ನಲ್ಲಿ ತಿಳಿಸಿರುವ ಪ್ರವರ್ಗಕ್ಕಿಂತ ಹೆಚ್ಚಿನ ಬೆಲೆಯ ಕೊಠಡಿಯಲ್ಲಿ ದಾಖಲಾಗಿದ್ದರೆ, ಅದಕ್ಕೆ ತಗಲುವ (ಹೆಚ್ಚುವರಿ ಶುಲ್ಕವನ್ನು ಅಥವಾ ತೆರಿಗೆ ಸೇರಿದಂತೆ) ಸಂಬಂಧಪಟ್ಟ ವೈದ್ಯಕೀಯ ವೆಚ್ಚಗಳ ಅತಿರಿಕ್ತ ವೆಚ್ಚವನ್ನು ನೀವು ಭರಿಸಬೇಕಾಗುತ್ತದೆ.
2. **ಡೇಕೇರ್ ಕಾರ್ಯವಿಧಾನ/ಚಿಕಿತ್ಸೆ:** ನೀವು ಡೇಕೇರ್ ಕಾರ್ಯವಿಧಾನ/ ಚಿಕಿತ್ಸೆಗೆ ಒಳಪಟ್ಟು, ಈ ಪ್ರಕ್ರಿಯೆಗಾಗಿ 24 ಗಂಟೆಗಳಿಗಿಂತ ಕಡಿಮೆ ಅವಧಿಗೆ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಆ ವೈದ್ಯಕೀಯ ವೆಚ್ಚವನ್ನು ನಾವು ಭರಿಸುತ್ತೇವೆ.
    i. ಒಂದು ವೇಳೆ ನೀವು ಪಾಲಿಸಿ ಶೆಡ್ಯೂಲ್ ನಲ್ಲಿ ತಿಳಿಸಿರುವ ಪ್ರವರ್ಗಕ್ಕಿಂತ ಹೆಚ್ಚಿನ ಬೆಲೆಯ ಕೊಠಡಿಯಲ್ಲಿ ದಾಖಲಾಗಿದ್ದರೆ, ಅದಕ್ಕೆ ತಗಲುವ (ಹೆಚ್ಚುವರಿ ಶುಲ್ಕವನ್ನು ಅಥವಾ ತೆರಿಗೆ ಸೇರಿದಂತೆ) ಸಂಬಂಧಪಟ್ಟ ವೈದ್ಯಕೀಯ ವೆಚ್ಚಗಳ ಅತಿರಿಕ್ತ ವೆಚ್ಚವನ್ನು ನೀವು ಭರಿಸಬೇಕಾಗುತ್ತದೆ.
3. **ತಾಂತ್ರಿಕ ಪ್ರಗತಿ ಮತ್ತು ಚಿಕಿತ್ಸೆಗಳು** – ಪಾಲಿಸಿ ಅವಧಿಯಲ್ಲಿ ನೀವು ಈ ಕೆಳಕಂಡ ತಾಂತ್ರಿಕ ಪ್ರಗತಿ ಹಾಗೂ ಚಿಕಿತ್ಸೆ ಪಡೆದಲ್ಲಿ, ವಾರ್ಷಿಕ್ ವಿಮಾ ಮೊತ್ತದಷ್ಟು ಖರ್ಚನ್ನು ನಾವು ಪಾವತಿಸುತ್ತೇವೆ.

| ಕ್ರ.ಸಂ. | ಚಿಕಿತ್ಸೆ/ಪ್ರಕ್ರಿಯೆ |
|---|---|
| 1 | ಗರ್ಭಾಶಯ ಅಪಧಮನಿ ಫಲೀಕರಣ ಹಾಗೂ ಎಚ್ ಐಎಫ್‌ಯ (ಹೈ ಇಂಟೆನ್ಸಿಟಿ ಫೋಕಸ್ಡ್ ಅಲ್ಟ್ರಾಸೌಂಡ್) |
| 2 | ಇಮ್ಯುನೋಥೆರಪಿ– ಚುಚ್ಚುಮದ್ದಿನ ಮೂಲಕ ನೀಡುವ ಮಲೋಕ್ಲೋನಲ್ ಪ್ರತಿಕಾಯ |
| 3 | ಪ್ರಾಸ್ಟೇಟ್ ನ ವೇಪರೈಸೇಷನ್ (ಹಸಿರು ಲೇಸರ್ ಚಿಕಿತ್ಸೆ ಅಥವಾ ಹಾಲ್ಮಿಯಂ ಲೇಸರ್ ಚಿಕಿತ್ಸೆ) |
| 4 | ಕಾಂಡಕೋಶ ಚಿಕಿತ್ಸೆ: ರಕ್ತವಿಜ್ಞಾನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಸ್ಥಿಮಜ್ಜೆ ಕಸಿ ಮಾಡಲು ಹೆಮಟೋಪಯಟಿಕ್ ಕಾಂಡಕೋಶಗಳು |
| 5 | ಬಲೂನ್ ಸೈನುಪ್ಲ್ಯಾಸ್ಟಿ |
| 6 | ಮೌಖಿಕ ಕೀಮೋಥೆರಪಿ |
| 7 | ರೊಬೋಟಿಕ್ ಶಸ್ತ್ರಚಿಕಿತ್ಸೆಗಳು |
| 8 | ಸ್ಟೀರಿಯೋಟ್ಯಾಕ್ಟಿಕ್ ರೇಡಿಯೋ ಶಸ್ತ್ರಚಿಕಿತ್ಸೆಗಳು |
| 9 | ಆಳವಾದ ಮೆದುಳಿನ್ ಪ್ರಚೋದನೆ |
| 10 | ಇಂಟ್ರಾ ವಿಟ್ರಿಯಲ್ ಚುಚ್ಚುಮದ್ದು |
| 11 | ಶ್ವಾಸನಾಳದ ಥರ್ಮೋಪ್ಲ್ಯಾಸ್ಟಿ |
| 12 | ಐಒಎನ್ಎಂ – (ಇಂಟ್ರಾ ಆಪರೇಟಿವ್ ನ್ಯೂರೋ ಮಾನಿಟರಿಂಗ್) |

4. **ಆಸ್ಪತ್ರೀಕರಣಪೂರ್ವ ವೈದ್ಯಕೀಯ ವೆಚ್ಚಗಳು:** ಆಸ್ಪತ್ರೀಕರಣದ 90 ದಿನಗಳ ಮುನ್ನ ತಲೆದೋರುವ ಸಂಬಂಧಿತ ವೈದ್ಯಕೀಯ ವೆಚ್ಚವನ್ನು ವಾರ್ಷಿಕ ವಿಮಾ ಮೊತ್ತದವರೆಗೆ ನಾವು ಪಾವತಿಸುತ್ತೇವೆ.
5. **ಆಸ್ಪತ್ರೀಕರಣದನಂತರದವೈದ್ಯಕೀಯ ವೆಚ್ಚಗಳು:** ಆಸ್ಪತ್ರೀಕರಣದ ನಂತರದ 180 ದಿನಗಳ ಕಾಲ ತಲೆದೋರುವ ಸಂಬಂಧಿತ ವೈದ್ಯಕೀಯ ವೆಚ್ಚವನ್ನು ವಾರ್ಷಿಕ ವಿಮಾ ಮೊತ್ತದವರೆಗೆ ನಾವು ಪಾವತಿಸುತ್ತೇವೆ
6. **ಆಯುಷ್ ಒಳರೋಗಿ ಆಸ್ಪತ್ರೀಕರಣ:** ಆಯುಷ್ ಆಸ್ಪತ್ರೆ ಅಥವಾ ಆಯುಷ್ ಡೇಕೇರ್ ಕೇಂದ್ರದಲ್ಲಿ ಪಡೆಯುವ ಆಯುರ್ವೇದ, ಯೋಗ ಮತ್ತು ನ್ಯೂರೋಪತಿ, ಯುನಾನಿ, ಸಿದ್ಧ ಹಾಗೂ ಹೋಮಿಯೋಪತಿ (ಆಯುಷ್) ಪದ್ಧತಿಯ ಚಿಕಿತ್ಸೆಗಳ ವೆಚ್ಚವನ್ನು ನಾವು ಭರಿಸುತ್ತೇವೆ.
7. **ಡೊಮೆಸ್ಟಿಕ್ ರೋಡ್ ಆಂಬ್ಯುಲೆನ್ಸ್:** ಪಾಲಿಸಿ ಅವಧಿಯಲ್ಲಿ ವಿಮಾದಾರರನ್ನು ಅಪಘಾತ/ಅನಾರೋಗ್ಯದ ಸ್ಥಳದಿಂದ ಹತ್ತಿರದ ಆಸ್ಪತ್ರೆಗೆ ಸಾಗಿಸಲು ಅಗತ್ಯ ತುರ್ತು ಸೇವೆಗಳನ್ನು ಹೊಂದಿರುವ ಪಡೆಯುವ್ ಆಂಬ್ಯುಲೆನ್ಸ್ ಸೇವೆಯ ಖರ್ಚನ್ನು ವಾರ್ಷಿಕ ವಿಮಾ ಮೊತ್ತದವರೆಗೆ ನಾವು ಪಾವತಿಸುತ್ತೇವೆ.
8. **ದಾನಿ ವೆಚ್ಚಗಳು:** ವಿಮಾದಾರರು ಯಾವುದೇ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ಒಳಪಟ್ಟಲ್ಲಿ, ಆ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ವಾರ್ಷಿಕ ವಿಮಾ ಮೊತ್ತದಷ್ಟು ನಾವು ಭರಿಸುತ್ತೇವೆ.
9. **ವಸತಿ ಆಸ್ಪತ್ರೀಕರಣ:** ವಸತಿ ಆಸ್ಪತ್ರೀಕರಣವು 3 ನಿರಂತರ ದಿನಗಳ ಕಾಲ ನಡೆದಲ್ಲಿ, ಅದರ ವೆಚ್ಚವನ್ನು ವಾರ್ಷಿಕ ವಿಮಾ ಮೊತ್ತದ ಮಿತಿಯೊಳಗೆ ನಾವು ಪಾವತಿಸುತ್ತೇವೆ.

ಈ ಕೆಳಕಂಡ ಅಂಶಗಳಿಂದ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಈ ಪ್ರಯೋಜನದ ಅಡಿ ಮಾಡುವ ಯಾವುದೇ ಕ್ಲೇಮುಗಳಿಗೆ ನಾವು ಬಾಧ್ಯರಾಗಿರುವುದಿಲ್ಲ;

a. ಆಸ್ತಮಾ, ಬ್ರಾಂಖೈಟಿಸ್, ಟಾನ್ಸಿಲೈಟಿಸ್ ಹಾಗೂ ಲಾರಿಂಜೈಟಿಸ್ ಮತ್ತು ಫಾರಂಜೈಟಿಸ್ ಸೇರಿದಂತೆ ಮೇಲಿನ ಉಸಿರಾಟನಾಳದ ಸೋಂಕು, ಕೆಮ್ಮು ಮತ್ತು ನೆಗಡಿ, ಶೀತಜ್ವರ;

b. ಸಂಧಿವಾತ, ಗೌಟ್ ಮತ್ತು ರುಮ್ಯಾಟಿಸಮ್;

c. ಬೆನ್ನುಹುರಿ / ಡಿಸ್ಕ್ ತೊಂದರೆಗಳು

d. ಮೂತ್ರಪಿಂಡದ ದೀರ್ಘಕಾಲೀನ ಉರಿಯೂತ ಮತ್ತು ನೆಫ್ರಿಟಿಕ್ ಸಿಂಡ್ರೋಮ್;

e. ಯಕೃತ್ ಸಂಬಂಧಿ ಕಾಯಿಲೆ;

f. ಪೆಪ್ಟಿಕ್ ಹುಣ್ಣು;

g. ಅತಿಸಾರ ಹಾಗೂ ಎಲ್ಲಾ ಬಗೆಯ ಭೇದಿ, ಗ್ಯಾಸ್ಟ್ರೋಎಂಟರೈಟಿಸ್ ಸೇರಿದಂತೆ;

h. ಮಧುಮೇಹ ಮತ್ತು ಇನ್ಸಿಪೈಡಸ್;

i. ಮೂರ್ಛೆರೋಗ;

j. ರಕ್ತದೊತ್ತಡ;

k. ಯಾವುದೇ ಮೂಲದ ಜ್ವರ

10. **ಲಾಯಲ್ಟಿ ಬೋನಸ್:** ಪ್ರತಿ ಬಾರಿ ತಪ್ಪದೇ ಕಂಪನಿಯೊಂದಿಗೆ ಪಾಲಿಸಿ ನವೀಕರಣಗೊಳಿಸಿ ಶೇ.100 ವಾರ್ಷಿಕ ವಿಮಾ ಮೊತ್ತ ಪಾವತಿಸುವ ವಿಮಾದಾರರಿಗೆ ಪಾಲಿಸಿ ವರ್ಷದ ಕೊನೆಯಲ್ಲಿ, ಕ್ಲೇಮು ಮಾಡಿರಲಿ, ಇಲ್ಲದಿರಲಿ ಶೇ.20 ಲಾಯಲ್ಟಿ ಬೋನಸ್ ನೀಡುತ್ತೇವೆ. ಕ್ಲೇಮು ಮಾಡಿದಾಗಲೂ, ಲಾಯಲ್ಟಿ ಬೋನಸ್ ಕಡಿತಗೊಳ್ಳುವುದಿಲ್ಲ, ಅನಿಯಮಿತ ವಾರ್ಷಿಕ ವಿಮಾ ಮೊತ್ತ ಹೊಂದಿರುವ ಪಾಲಿಸಿಗಳಿಗೆ ಈ ಸೌಲಭ್ಯ ಇರುವುದಿಲ್ಲ

11. **ರೀಸೆಟ್ ಸೌಲಭ್ಯ:** ವಿಮಾದಾರ ಪಾಲಿಸಿ ವರ್ಷದಲ್ಲಿ ಯಾವುದೇ ಅನಾರೋಗ್ಯ/ಕಾಯಿಲೆ/ಗಾಯ ಎದುರಿಸಿದಲ್ಲಿ, ಅನಿಯಮಿತ ಬಾರಿ ನಾವು ಶೇ.100ರಷ್ಟು ವಾರ್ಷಿಕ ವಿಮಾ ಮೊತ್ತವನ್ನು ರೀಸೆಟ್ ಮಾಡುತ್ತೇವೆ. ಲಾಯಲ್ಟಿ ಬೋನಸ್ (ಇದ್ದಲ್ಲಿ)/ ಹಣದುಬ್ಬರ ರಕ್ಷಣೆ (ಆಯ್ಕೆ ಮಾಡಿಕೊಂಡಿದ್ದು ಸೇರಿಸಿದ್ದಲ್ಲಿ) / ಪವರ್ ಬೂಸ್ಟರ್ (ಆಯ್ಕೆ ಮಾಡಿಕೊಂಡಿದ್ದು ಸೇರಿಸಿದ್ದಲ್ಲಿ) ವಾರ್ಷಿಕ ವಿಮಾ ಮೊತ್ತವು ಆ ವರ್ಷದಲ್ಲಿ ಮಾಡಿದ ಕ್ಲೇಮುಗಳಿಂದಾಗಿ ಸಾಲದಾಗಿದ್ದರೆ:

    i. ಒಳರೋಗಿ ಚಿಕಿತ್ಸೆ ಅಥವಾ ಡೇಕೇರ್ ಪ್ರಕ್ರಿಯೆ ಅಥವಾ ಒಳರೋಗಿ ಆಯುಷ್ ಆಸ್ಪತ್ರೀಕರಣಗಳ ಅಡಿ ಕ್ಲೇಮು ಸ್ವೀಕಾರಾರ್ಹವಾಗಿದ್ದಲ್ಲಿ ಮಾತ್ರ ಕ್ಲೇಮು ಸ್ವೀಕಾರಾರ್ಹವಾಗುತ್ತದೆ

    ii. ಮೊದಲ ಕ್ಲೇಮಿಗೆ ರೀಸೆಟ್ ಆಗುವುದಿಲ್ಲ

    iii. ವೈಯಕ್ತಿಕ ಪಾಲಿಸಿಗಳಿಗೆ, ರೀಸೆಟ್ ಮೊತ್ತವು ವೈಯಕ್ತಿಕವಾಗಿ ಸಿಗಲಿದ್ದು, ಫ್ಲೋಟರ್ ಪಾಲಿಸಿಗಳಿಗೆ ಫ್ಲೋಟರ್ ಆಧಾರದ ಮೇಲೆ ಸಿಗಲಿದೆ

    iv. ಒಬ್ಬ ವಿಮಾದಾರನಿಗೆ ಯಾವುದೇ ಅನಾರೋಗ್ಯ / ಗಾಯ ಅಥವಾ ಸಂಬಂಧಿತ ತೊಂದರೆಗಳ ಕ್ಲೇಮಿಗಾಗಿ ಆ ಪಾಲಿಸಿ ವರ್ಷದಲ್ಲಿ ಪಾವತಿಯಾಗಿದ್ದಲ್ಲಿ, ಆ ತೊಂದರೆಗಳು 45 ದಿನಗಳೊಳಗೆ ಮರುಕಳಿಸಿದಲ್ಲಿ ಆಗ ರೀಸೆಟ್ ಸೌಲಭ್ಯ ಇರುವುದಿಲ್ಲ

    v. ಒಂದು ಅವಧಿಯಲ್ಲಿ ಬಳಕೆಯಾಗದ ರೀಸೆಟ್ ವಿಮಾ ಮೊತ್ತವನ್ನು ಮುಂದಿನ ಅವಧಿಗೆ ಮುಂದುವರೆಸುವುದಿಲ್ಲ

    vi. ಭಾರತದ ಭೌಗೋಳಿಕ ಮಿತಿಯಿಂದಾಚೆ ಮಾಡಿದ ಕ್ಲೇಮುಗಳಿಗೆ ರೀಸೆಟ್ ಸೌಲಭ್ಯ ಇರುವುದಿಲ್ಲ

12. **ಬ್ಯಾರಿಯಾಟ್ರಿಕ್ ಶಸ್ತ್ರಚಿಕಿತ್ಸೆ ಸುರಕ್ಷೆ:** ವಿಮಾದಾರ ಸ್ಥೂಲಕಾಯದ ಶಸ್ತ್ರಚಿಕಿತ್ಸೆ/ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಲ್ಲಿ, ಅದರ ಖರ್ಚಿನಲ್ಲಿ ವಾರ್ಷಿಕ ವಿಮಾ ಮೊತ್ತದಷ್ಟನ್ನು ನಾವು ಕೊಡುತ್ತೇವೆ. ಇದು ಪಾಲಿಸಿಯಲ್ಲಿ ತಿಳಿಸಿರುವ ಅರ್ಹತಾ ಮಾನದಂಡ ಹಾಗೂ ಷರತ್ತುಗಳಿಗೆ ಒಳಪಟ್ಟಿದೆ. ಈ ಸುರಕ್ಷೆಗೆ 2 ವರ್ಷಗಳ ನಿರೀಕ್ಷಾ ಅವಧಿ ಇರುತ್ತದೆ. ಆದಾಗ್ಯೂ, ಐಚ್ಛಿಕ ಸುರಕ್ಷೆಯಾಗಿದ್ದು 3 ಜಂಪ್‌ಸ್ಟಾರ್ಟ್ ಆರಿಸಿಕೊಂಡಿದ್ದಲ್ಲಿ, ಈ ನಿರೀಕ್ಷಾ ಅವಧಿಯು 30 ದಿನಗಳಿಗೆ ಕಡಿತಗೊಳ್ಳುತ್ತದೆ

13. **ಬಾಡಿಗೆ ತಾಯಿಯ ಒಳರೋಗಿ ಆಸ್ಪತ್ರೀಕರಣ:** ಉದ್ದೇಶಿತ ದಂಪತಿ/ಉದ್ದೇಶಿತ ಮಹಿಳೆ ನೇಮಿಸಿದ ಬಾಡಿಗೆ ತಾಯಿಯ ಗರ್ಭಾವಸ್ಥೆಗೆ ಸಂಬಂಧಿಸಿದ ಯಾವುದೇ ತೊಡಕು ಅಥವಾ ಪ್ರಸವದ ನಂತರದ ಆರೋಗ್ಯ ಸಮಸ್ಯೆಗಳ ಕಾರಣದಿಂದ ಆಕೆ ಪಾಲಿಸಿ ಅವಧಿಯಲ್ಲಿ ಆಸ್ಪತ್ರೆಗೆ ದಾಖಲಾದಲ್ಲಿ, ಅದರ ಖರ್ಚನ್ನು ಗರಿಷ್ಠ ರೂ.5 ಲಕ್ಷದವರೆಗೆ ನಾವು ನೀಡುತ್ತೇವೆ. ಕೆಳಕಂಡ ಷರತ್ತುಗಳು ಅನ್ವಯಿಸುತ್ತವೆ:

    i. 30 ದಿನಗಳ ಆರಂಭಿಕ ನಿರೀಕ್ಷಾ ಅವಧಿ ಅನ್ವಯಿಸಲಿದೆ

    ii. ಈ ಸೌಲಭ್ಯವು ಎಲ್ಲಾ ಅಥವಾ 3 ವರ್ಷಗಳ ಪಾಲಿಸಿ ಅವಧಿ ಆಯ್ಕೆ ಮಾಡಿಕೊಂಡ ಮಹಿಳೆಯರಿಗೆ ಅನ್ವಯಿಸುತ್ತದೆ

    iii. ಬಾಡಿಗೆ ತಾಯಿಯಾಗುವ ಪ್ರಕ್ರಿಯೆ ಯಶಸ್ವಿಗೊಂಡ ನಂತರದ 36 ನಿರಂತರ ತಿಂಗಳುಗಳ ಅವಧಿಗೆ ಬಾಡಿಗೆ ತಾಯಿಗೆ ಈ ಸೌಲಭ್ಯ ಸಿಗುತ್ತದೆ

    iv. ಮಗುವಿನ ಜನನ (ಸಾಮಾನ್ಯ ಹೆರಿಗೆ ಅಥವಾ ಶಸ್ತ್ರಚಿಕಿತ್ಸೆ) ಕ್ಕೆ ತಗಲುವ ಖರ್ಚುಗಳು ಈ ಸುರಕ್ಷೆಗೆ ಒಳಪಡುವುದಿಲ್ಲ

    v. ಬಾಡಿಗೆ ತಾಯ್ತನ ನಿಯಂತ್ರಣ ಕಾಯ್ದೆ (2021) ರ ಎಲ್ಲಾ ನಿಬಂಧನೆಗಳು ಮತ್ತು ಎಲ್ಲಾ ನಿಯಮಗಳ ಪಾಲನೆಯಾಗಿದ್ದಲ್ಲಿ ಮಾತ್ರ ಈ ಸುರಕ್ಷೆ ಸಿಗಲಿದೆ

    vi. ಒಳರೋಗಿ ಶಸ್ತ್ರಚಿಕಿತ್ಸೆಯ ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

    ವಿವರವಾದ ನಿಯಮಗಳು ಮತ್ತು ಷರತ್ತುಗಳನ್ನು ತಿಳಿಯಲು ದಯವಿಟ್ಟು ಪಾಲಿಸಿಯನ್ನು ಓದಿರಿ

14. **ಅಂಡಾಣು ದಾನಿಯ ಒಳರೋಗಿ ಆಸ್ಪತ್ರೀಕರಣ:** ಉದ್ದೇಶಿತ ದಂಪತಿ/ಉದ್ದೇಶಿತ ಮಹಿಳೆ ನೇಮಿಸಿದ ಅಂಡಾಣು ದಾನಿಯ ಅಂಡಾಣು ಪಡೆಯುವ ಪ್ರಕ್ರಿಯೆಯಲ್ಲಿ ಯಾವುದೇ ತೊಡಕಿನ ಕಾರಣದಿಂದ ಆಕೆ ಪಾಲಿಸಿ ಅವಧಿಯಲ್ಲಿ ಆಸ್ಪತ್ರೆಗೆ ದಾಖಲಾದಲ್ಲಿ, ಅದರ ಖರ್ಚನ್ನು ಗರಿಷ್ಠ ರೂ.5 ಲಕ್ಷದವರೆಗೆ ನಾವು ನೀಡುತ್ತೇವೆ. ಕೆಳಕಂಡ ಷರತ್ತುಗಳು ಅನ್ವಯಿಸುತ್ತವೆ:

    i. ಅಂಡಾಣು ಪಡೆಯುವಿಕೆ ಪ್ರಕ್ರಿಯೆ ಯಶಸ್ವಿಗೊಂಡ ನಂತರದ 12 ತಿಂಗಳುಗಳ ಕಾಲ ಮಾತ್ರ ಈ ಸುರಕ್ಷೆ ಅನ್ವಯಿಸುತ್ತದೆ.

    ii. ಈ ಸೌಲಭ್ಯವು ಎಲ್ಲಾ ಅಥವಾ ಯಾವುದೇ ಮಹಿಳಾ ವಿಮಾದಾರರಿಗೆ ಅನ್ವಯಿಸುತ್ತದೆ

    iii. ಮಗುವಿನ ಜನನ (ಸಾಮಾನ್ಯ ಹೆರಿಗೆ ಅಥವಾ ಶಸ್ತ್ರಚಿಕಿತ್ಸೆ) ಕ್ಕೆ ತಗಲುವ ಖರ್ಚುಗಳು ಈ ಸುರಕ್ಷೆಗೆ ಒಳಪಡುವುದಿಲ್ಲ

    iv. ನೆರವಿನ ಸಂತಾನೋತ್ಪತ್ತಿ ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ, 2021ರ ಎಲ್ಲಾ ನಿಬಂಧನೆಗಳು ಮತ್ತು ಎಲ್ಲಾ ನಿಯಮಗಳ ಪಾಲನೆಯಾಗಿದ್ದಲ್ಲಿ ಮಾತ್ರ ಈ ಸುರಕ್ಷೆ ಸಿಗಲಿದೆ

    v. ಒಳರೋಗಿ ಚಿಕಿತ್ಸೆಯ ಎಲ್ಲಾ ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ

    ವಿವರವಾದ ನಿಯಮಗಳು ಮತ್ತು ಷರತ್ತುಗಳನ್ನು ತಿಳಿಯಲು ದಯವಿಟ್ಟು ಪಾಲಿಸಿಯನ್ನು ಓದಿರಿ

15. **ಕ್ಷೇಮ ಕಾರ್ಯಕ್ರಮ:** ಕ್ಷೇಮ ಕಾರ್ಯಕ್ರಮವು ನಿಮಗೆ ಈ ಕೆಳಕಂಡ ಪ್ರಯೋಜನಗಳನ್ನು ನೀಡಲಿದೆ–

I. ಕ್ಷೇಮ ಕಾರ್ಯಕ್ರಮ

II. ಆರೋಗ್ಯ ನೆರವು (ಎಚ್‌ಎಟಿ)

III. ಆಂಬ್ಯುಲೆನ್ಸ್ ನೆರವು

IV. ಸೇವೆ ಹಾಗೂ ಉತ್ಪನ್ನಗಳ ಮೇಲೆ ರಿಯಾಯಿತಿ

I. ಕ್ಷೇಮ ಕಾರ್ಯಕ್ರಮ

ಕ್ಷೇಮ ಕಾರ್ಯಕ್ರಮವು ವಿವಿಧ ಕ್ಷೇಮ ಸೇವೆಗಳ ಮೂಲಕ ನಿಮ್ಮ ಆರೋಗ್ಯಕರ ಜೀವನಕ್ರಮವನ್ನು ಪ್ರಚಾರಪಡಿಸುವ, ಪ್ರೋತ್ಸಾಹಿಸುವ ಹಾಗೂ ಅದಕ್ಕಾಗಿ ನಿಮಗೆ ಕೊಡುಗೆ ನೀಡುವ ಉದ್ದೇಶ ಹೊಂದಿದೆ. ಕ್ಷೇಮ ಕಾರ್ಯಕ್ರಮವು ಒಬ್ಬ ವಯಸ್ಕ ವಿಮಾದಾರನಿಗೆ ಲಭ್ಯವಿದ್ದು ಫ್ಲೋಟರ್ ಪಾಲಿಸಿಯಡಿ ಅದನ್ನು ಗರಿಷ್ಠ ಇನ್ನಿಬ್ಬರು ವಯಸ್ಕರಿಗೆ ವಿಸ್ತರಿಸಬಹುದು. ಕೆಳಕಂಡ ಟೇಬಲ್ ಏಎಟಿನಲ್ಲಿ ತಿಳಿಸಿರುವ ಎಲ್ಲಾ ಕ್ಷೇಮ ಚಟುವಟಿಕೆಗಳ ಮೂಲಕ ನೀವು ಕ್ಷೇಮ ಅಂಕಗಳನ್ನು ಪಡೆದುಕೊಳ್ಳಬಹುದಾಗಿದ್ದು, ಅದನ್ನು ಆರೋಗ್ಯ ತರಬೇತುದಾರರು ನೋಡಿಕೊಳ್ಳಲಿದ್ದಾರೆ.

ಆರೋಗ್ಯ ತರಬೇತಿ ಗರಿಷ್ಠ 2 ವಯಸ್ಕ ವಿಮಾದಾರರಿಗೆ ಮಾತ್ರ ಲಭ್ಯರಿರುತ್ತಾರೆ. ಆರೋಗ್ಯ ತರಬೇತಿ ಒಂದು ವೈಯಕ್ತೀಕರಿಸಿದ ಸೇವೆಯಾಗಿದ್ದು ಡಿಜಿಟಲ್ ಮಾಧ್ಯಮದ ಮೂಲಕ ನಿಮ್ಮ ಆರೋಗ್ಯ ಮತ್ತು ದೇಹಿಕ ಹಾಗೂ ಮಾನಸಿಕ ಕ್ಷೇಮ ಕಾಪಾಡಿಕೊಳ್ಳಲು ನಿಮ್ಮನ್ನು ಉತ್ತೇಜಿಸುತ್ತದೆ. ನಮ್ಮ ಮೊಬೈಲ್ ಅಪ್ಲಿಕೇಷನ್‌ನ್ನು ಡೌನ್ ಲೋಡ್ ಮಾಡಿ ನೋಂದಣಿ ಮಾಡಿಕೊಂಡಲ್ಲಿ ನಿಮಗೆ ಆರೋಗ್ಯ ತರಬೇತಿಯ ಸೌಲಭ್ಯ ದೊರೆಯಲಿದೆ. ಇದನ್ನು ಪಾಲಿಸಿ ಆರಂಭಗೊಂಡ 30 ದಿನಗಳ ಒಳಗೆ ಮಾಡಬೇಕಿದ್ದು ಇದರಿಂದ ಲಭ್ಯವಿರುವ ಸೇವೆಗಳ ಸೂಕ್ತ ಬಳಕೆ ಹಾಗೂ ಕ್ಷೇಮ ಅಂಕಗಳನ್ನು ಪಡೆದುಕೊಳ್ಳಲು ಸಾಧ್ಯವಾಗಲಿದೆ.

ನೋಂದಾಯಿಸಿಕೊಂಡ ಬಳಿಕ ಹಾಗೂ ಆರೋಗ್ಯ ಅಪಾಯದ ಮೌಲ್ಯಮಾಪನ (ಎಚ್‌ಆರ್‌ಎ) ವನ್ನು ಯಶಸ್ವಿಯಾಗಿ ಮುಗಿಸಿದರೆ, ಆರೋಗ್ಯ ತರಬೇತುದಾರ ನಿಮ್ಮನ್ನು ಮೌಲ್ಯಮಾಪನಕ್ಕೆ ಒಳಪಡಿಸಿ, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುತ್ತಾರೆ.

**ಟೇಬಲ್ ಎ- ಕ್ಷೇಮ ಅಂಕಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆ**

| ಪ್ರವರ್ಗ | ಪಾಲಿಸಿ ಅವಧಿ | ವೈಯಕ್ತಿಕ ಪಾಲಿಸಿ 1 ವರ್ಷ | ಫ್ಲೋಟರ್ ಪಾಲಿಸಿ * 1 ವರ್ಷ |
|---|---|---|---|
| | ಚಟುವಟಿಕೆ ವಿವರಗಳು | ಒಬ್ಬ ವಿಮಾದಾರನ ಗರಿಷ್ಠ ಅಂಕಗಳು | ಒಬ್ಬ ವಿಮಾದಾರನ ಗರಿಷ್ಠ ಅಂಕಗಳು |
| ಆರೋಗ್ಯ ಮೌಲ್ಯಮಾಪನ | ಆರೋಗ್ಯ ಅಪಾಯದ ಮೌಲ್ಯಮಾಪನ | 500 | 250 |
| | ಒಳಪಡುವ ಆರೋಗ್ಯ ತಪಾಸಣೆ & ವರದಿಗಳು | 1,000 | 500 |
| | ಮೂರು ತಿಂಗಳಿಗೊಮ್ಮೆ ಸ್ಕ್ಯಾನ್ | 400 | 200 |
| | ಆರೋಗ್ಯ ತಜ್ಞರು/ಆರೋಗ್ಯ ತರಬೇತಿ ಸೇವೆ ಒದಗಿಸುವವರೊಂದಿಗೆ ಮೊದಲ ಮಾತುಕತೆ | 100 | 50 |
| ಕ್ಷೇಮ ಚಟುವಟಿಕೆಗಳು | ಐಸಿಐಸಿಐ ಲೊಂಬಾರ್ಡ್ ಪ್ರಸ್ತುತ ಸ್ಪರ್ಧೆ/ಆರೋಗ್ಯ ರಸಪ್ರಶ್ನೆ (ಯಾವುದೇ ಒಂದು ಸ್ಪರ್ಧೆ) | 200 | 100 |
| | ಐಸಿಐಸಿಐ ಲೊಂಬಾರ್ಡ್ ಪ್ರಸ್ತುತ ವೆಬಿನಾರ್ (ಯಾವುದೇ ಒಂದು ವೆಬಿನಾರ್) | 500 | 250 |
| ಕ್ಷೇಮ ಕಾರ್ಯಗಳು | ತಿಂಗಳ ಗುರಿ ಮುಟ್ಟುವಿಕೆ (ಪೂರ್ಣಗೊಳಿಸಿದ ಹಂತಗಳನ್ನು ಆಧರಿಸಿ 10/15/25 ಅಂಕಗಳು/ಪ್ರತಿದಿನ) | 6,000 | 3,000 |
| ಕ್ಷೇಮ ಸವಾಲುಗಳು | ಆಪ್‌ನಲ್ಲಿ ದೃಢತೆಯ ಸವಾಲಿನಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಯಶಸ್ವಿಯಾಗಿ ಪೂರ್ಣಗೊಳಿಸುವಿಕೆ | 500 (ಒಂದು ಸವಾಲಿಗೆ 250) | ಸವಾಲೊಂದಕ್ಕೆ 250 |
| ಆರೋಗ್ಯ ಕಾರ್ಯಕ್ರಮಗಳು | ಮ್ಯಾರಥಾನ್/ಸೈಕ್ಲಥಾನ್/ ಸ್ವಿಮಥಾನ್ ಇಂತಹ ವೃತ್ತಿಪರ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ | 500 | 250 |
| **ಒಟ್ಟು** | | **9,400** | **4,700** |

2 ವರ್ಷ ಹಾಗೂ 3 ವರ್ಷ ಪಾಲಿಸಿ ಅವಧಿ ಹೊಂದಿರುವ ಬಹು-ವರ್ಷಗಳ ಪಾಲಿಸಿಗಳಿಗೆ ನೀಡಲಾಗುವ ಗರಿಷ್ಠ ಕ್ಷೇಮ ಅಂಕಗಳನ್ನು ಈ ಕೆಳಕಂಡ ಟೇಬಲ್ನಲ್ಲಿ ತಿಳಿಸಲಾಗಿದೆ

| ಪ್ರವರ್ಗ | ಪಾಲಿಸಿ ಅವಧಿ | ವೈಯಕ್ತಿಕ | | ಫ್ಲೋಟರ್ | |
|---|---|---|---|---|---|
| | | 2 ವರ್ಷ | 3 ವರ್ಷ | 2 ವರ್ಷ | 3 ವರ್ಷ |
| | ಚಟುವಟಿಕೆ ವಿವರಗಳು | Max Points Earned per Insured | Max Points Earned per Insured | Max Points Earned per Insured | Max Points Earned per Insured |
| ಆರೋಗ್ಯ ಮೌಲ್ಯಮಾಪನ | ಆರೋಗ್ಯ ಅಪಾಯದ ಮೌಲ್ಯಮಾಪನ | 1,000 | 1500 | 500 | 750 |
| | ಒಳಪಡುವ ಆರೋಗ್ಯ ತಪಾಸಣೆ & ವರದಿಗಳು | 2,000 | 3,000 | 1,000 | 1,500 |
| | ಮೂರು ತಿಂಗಳಿಗೊಮ್ಮೆ ಸ್ಕ್ಯಾನ್ | 800 | 1,200 | 400 | 600 |
| | ಆರೋಗ್ಯ ತಜ್ಞರು / ಆರೋಗ್ಯ ತರಬೇತಿ ಸೇವೆ ಒದಗಿಸುವವರೊಂದಿಗೆ ಮೊದಲ ಮಾತುಕತೆ | 200 | 300 | 100 | 150 |
| ಕ್ಷೇಮ ಚಟುವಟಿಕೆಗಳು | ಐಸಿಐಸಿಐ ಲೊಂಬಾರ್ಡ್ ಪ್ರಸ್ತುತ ಸ್ಪರ್ಧೆ / ಆರೋಗ್ಯ ರಸಪ್ರಶ್ನೆ (ಯಾವುದೇ ಒಂದು ಸ್ಪರ್ಧೆ) | 400 | 600 | 200 | 300 |
| | ಐಸಿಐಸಿಐ ಲೊಂಬಾರ್ಡ್ ಪ್ರಸ್ತುತ ವೆಬಿನಾರ್ (ಯಾವುದೇ ಒಂದು ವೆಬಿನಾರ್) | 400 | 600 | 200 | 300 |
| ಕ್ಷೇಮ ಕಾರ್ಯಗಳು | ತಿಂಗಳ ಗುರಿ ಮುಟ್ಟುವಿಕೆ (ಪೂರ್ಣಗೊಳಿಸಿದ ಹಂತಗಳನ್ನು ಆಧರಿಸಿ 10/15/25 ಅಂಕಗಳು/ಪ್ರತಿದಿನ) | 12,000 | 18,000 | 6,000 | 9,000 |
| ಕ್ಷೇಮ ಸವಾಲುಗಳು | ಆಪ್‌ನಲ್ಲಿ ದೃಢತೆಯ ಸವಾಲಿನಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಯಶಸ್ವಿಯಾಗಿ ಪೂರ್ಣಗೊಳಿಸುವಿಕೆ | 1,000 | 1,500 | 500 | 750 |
| ಆರೋಗ್ಯ ಕಾರ್ಯಕ್ರಮಗಳು | ಮ್ಯಾರಥಾನ್ / ಸೈಕ್ಲಥಾನ್ / ಸ್ವಿಮಥಾನ್ ಇಂತಹ ವೃತ್ತಿಪರ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ | 1,000 | 1,500 | 500 | 750 |

* ಫ್ಲೋಟರ್ ಪಾಲಿಸಿಯಲ್ಲಿ, ಪ್ರತಿ ಚಟುವಟಿಕೆಯಲ್ಲಿ ಒಬ್ಬ ವಿಮಾದಾರ ಗಳಿಸಿದ ಕ್ಷೇಮ ಅಂಕಗಳನ್ನು ನವೀಕೃತ ರಿಯಾಯಿತಿ ಲೆಕ್ಕಹಾಕಲು ಸೇರಿಸಿಕೊಳ್ಳಬೇಕು.

ಕ್ಷೇಮ ಕಾರ್ಯಗಳ ಭಾಗವಾಗಿ, ತಿಂಗಳಿನಲ್ಲಿ ಕನಿಷ್ಠ 20 ದಿನಗಳಂತೆ ದೈನಂದಿನ ಗುರಿ ತಲುಪಿದ್ದಕ್ಕಾಗಿ ನಿಮಗೆ ಕ್ಷೇಮ ಅಂಕಗಳನ್ನು ನೀಡಲಾಗುತ್ತದೆ

**ಟೇಬಲ್ ಬಿ- ಗುರಿಯಿಟ್ಟ ಹೆಜ್ಜೆಗಳನ್ನು ತಲುಪುವ ಮೂಲಕ ಕ್ಷೇಮ ಅಂಕಗಳನ್ನು ಗಳಿಸುವ ಪ್ರಕ್ರಿಯೆ**

| ತಿಂಗಳ 20 ದಿನಗಳಲ್ಲಿ ತಲುಪುವ ಸರಾಸರಿ ಹೆಜ್ಜೆಗಳು | ತಿಂಗಳ ಗರಿಷ್ಠ ಕ್ಷೇಮ ಅಂಕಗಳು | ವರ್ಷದಲ್ಲಿ ಒಟ್ಟುಗೂಡಿದ ಗರಿಷ್ಠ ಕ್ಷೇಮ ಅಂಕಗಳು | | |
|---|---|---|---|---|
| | | 1 ವರ್ಷ | 2 ವರ್ಷ | 3 ವರ್ಷ |
| 8,000+ ಹೆಜ್ಜೆಗಳು | 500 | 6000 | 12000 | 18000 |
| 6,000ದಿಂದ 7,999 ಹೆಜ್ಜೆಗಳು | 300 | 3600 | 7200 | 10800 |
| 4,000ದಿಂದ 5,999 ಹೆಜ್ಜೆಗಳು | 200 | 2400 | 4800 | 7200 |
| <4000 ಹೆಜ್ಜೆಗಳು | ಸೊನ್ನೆ | ಸೊನ್ನೆ | ಸೊನ್ನೆ | ಸೊನ್ನೆ |

**ಕ್ಷೇಮ ಅಂಕಗಳ ಪಡೆದುಕೊಳ್ಳುವಿಕೆ**

ನೀವು ಗಳಿಸಿದ ಕ್ಷೇಮ ಅಂಕಗಳನ್ನು (ಟೇಬಲ್ 'ಎ' ಮತ್ತು ಟೇಬಲ್ 'ಬಿ'ಯಲ್ಲಿ ವಿವರಿಸಿದಂತೆ) ಮುಂದಿನ ಪಾಲಿಸಿ ವರ್ಷಕ್ಕೆ ಪ್ರೀಮಿಯಂ ನವೀಕರಿಸಿದಾಗ ಪಡೆಯುವ ರಿಯಾಯಿತಿಯಲ್ಲಿ ಸೇರಿಸಲಾಗುವುದು. ಈಗಾಗಲೇ ಒಟ್ಟುಗೂಡಿಸಿಕೊಂಡ ಕ್ಷೇಮ ಅಂಕಗಳಿಗೆ ಅನುಗುಣವಾಗಿ ಪಡೆಯಬಹುದಾದ ನವೀಕೃತ ರಿಯಾಯಿತಿಯನ್ನು ಟೇಬಲ್ 'ಸಿ'ಯಲ್ಲಿ ಕಾಣಬಹುದು. ನಂತರದ ವರ್ಷಕ್ಕೆ ಗರಿಷ್ಠ ಶೇ.30ರಷ್ಟು ನವೀಕೃತ ರಿಯಾಯಿತಿ ಪಡೆದುಕೊಳ್ಳಬಹುದು.

**ಟೇಬಲ್ ಸಿ- ಕ್ಷೇಮ ಅಂಕಗಳಿಂದ ಪಡೆಯಬಹುದಾದ ನವೀಕೃತ ರಿಯಾಯಿತಿ**

| ಸಾಮಾನ್ಯ ದೃಢತೆ ಸಂಬಂಧಿತ ಚಟುವಟಿಕೆಗಳು | ಒಬ್ಬ ವಿಮಾದಾರನಿಗೆ ದೊರೆತ ಕ್ಷೇಮ ಅಂಕಗಳು* | | | ನವೀಕೃತ ರಿಯಾಯಿತಿ | |
|---|---|---|---|---|---|
| | 1 ವರ್ಷ | 2 ವರ್ಷ | 3 ವರ್ಷ | ವೈಯಕ್ತಿಕ | ಫ್ಲೋಟರ್ (ಒಬ್ಬ ವಿಮಾದಾರನಿಗೆ) |
| ಅಂಕಗಳು | 2500-3999 | 5000-7999 | 7500-11999 | 2.5% | 1.25% |
| | 4000-4999 | 8000-9999 | 12000-14999 | 5% | 2.5% |
| | 5000-6999 | 10000-13999 | 15000-20999 | 10% | 5% |
| | 7000-8999 | 14000-17999 | 21000-26999 | 20% | 10% |
| | >9000 | >18000 | >27000 | 30% | 15% |

*ಒಬ್ಬ ವಿಮಾದಾರನು ಮೊದಲ ವರ್ಷ ಕನಿಷ್ಠ 9,000 ಕ್ಷೇಮಾಂಕಗಳು, ಎರಡನೇ ವರ್ಷ 18,000 ಕ್ಷೇಮಾಂಕಗಳು, ಮೂರನೇ ವರ್ಷ 27,000 ಕ್ಷೇಮಾಂಕಗಳಂತೆ ಪ್ರತಿ ವರ್ಷ ಗಳಿಸಿದಲ್ಲಿ ರಿಯಾಯಿತಿ ಪಡೆಯಬಹುದು.

### ಟೇಬಲ್ ಡಿ- ಫ್ಲೋಟರ್ ಪಾಲಿಸಿಗಳಿಗೆ ಕ್ಲೇಮ ರಿಯಾಯಿತಿ ಪಡೆಯುವ ಕ್ರಮದ ವಿವರಣೆ

| ಪಡೆದುಕೊಳ್ಳುವ ಕ್ರಮ | ಕ್ಲೇಮ ರಿಯಾಯಿತಿ | ಹೊಸ ಪ್ರೀಮಿಯಂ | ಪಾವತಿಸಬೇಕಾದ ನವೀಕೃತ ಪ್ರೀಮಿಯಂ |
|---|---|---|---|
| ವಿಮಾದಾರ 1 ರಿಂದ ಪ್ರೀಮಿಯಂ ನವೀಕರಣದ ಮೇಲೆ ಪಡೆದ ರಿಯಾಯಿತಿ | 15% | | |
| ವಿಮಾದಾರ 2 ರಿಂದ ಪ್ರೀಮಿಯಂ ನವೀಕರಣದ ಮೇಲೆ ಪಡೆದ ರಿಯಾಯಿತಿ | 15% | | |
| | ಒಟ್ಟು ರಿಯಾಯಿತಿ– ಶೇ. 30% | Rs.25,000 | Rs.25000 - (Rs.25000x30%)= Rs.17,500 |

**ಕ್ಲೇಮಾಂಕಗಳನ್ನು ಪಡೆದುಕೊಳ್ಳಲು ನಿಯಮ ಮತ್ತು ಷರತ್ತುಗಳು**

i. ನವೀಕರಣ ರಿಯಾಯಿತಿಯು ವಾರ್ಷಿಕ ಆಧಾರದ ಮೇಲೆ ಪಾಲಿಸಿಯ ನಂತರದ ವರ್ಷಕ್ಕೆ ಮಾತ್ರ ಅನ್ವಯಿಸುತ್ತದೆ. ಒಟ್ಟುಗೂಡಿದ ಅಂಕಗಳನ್ನು ಕಡ್ಡಾಯವಾಗಿ ನಂತರದ ವರ್ಷದ ಪಾಲಿಸಿಯ ನವೀಕರಣಕ್ಕೆ ಸೇರಿಸಲಾಗುವುದು ಮತ್ತು ಅದನ್ನು ಮುಂದಿನ ವರ್ಷಕ್ಕೆ ಮುಂದೂಡುವಂತಿಲ್ಲ.

ii. ನವೀಕರಣದ ಕೊನೆ ದಿನಾಂಕದ ಮುಂಚಿನ 90 ದಿನಗಳಲ್ಲಿ ಗಳಿಸಿದ ಕ್ಲೇಮಾಂಕದ ಆಧಾರದ ಮೇಲೆ ನವೀಕರಣ ರಿಯಾಯಿತಿ ನಿರ್ಧರವಾಗುತ್ತದೆ. ಉಳಿದ ಅಂಕಗಳನ್ನು ಮುಂದಿನ ಪಾಲಿಸಿ ವರ್ಷದ ಕ್ಲೇಮಾಂಕಗಳಿಗೆ ಸೇರಿಸಲಾಗುವುದು. ಹಾಗಾಗಿ, ಈ ಅಂಕಗಳು ನಷ್ಟವಾಗುವುದಿಲ್ಲ.

iii. ರಿಯಾಯಿತಿಯು ವೈಯಕ್ತಿಕ ಪ್ಲಾನ್ನಲ್ಲಿ ವೈಯಕ್ತಿಕ ಪ್ರೀಮಿಯಂ ಮೇಲೆ ಹಾಗೂ ಫ್ಲೋಟರ್ ಪ್ಲಾನ್ನಲ್ಲಿ ಫ್ಲೋಟರ್ ಪಾಲಿಸಿ ಪ್ರೀಮಿಯಂ ಮೇಲೆ ಇರುತ್ತದೆ. 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ವಿಮಾದಾರರಿಗೆ ರಿಯಾಯಿತಿ ನೀಡಲಾಗುತ್ತದೆ. ನವೀಕರಣದ ಸಂದರ್ಭದಲ್ಲಿ ವಿಮಾದಾರನು ಹೆಚ್ಚಿನ ಅಥವಾ ಕಡಿಮೆ ಕಾಲದ ಪಾಲಿಸಿ ಅವಧಿ ಆರಿಸಿಕೊಂಡಿದ್ದಲ್ಲಿ ಹಿಂದಿನ ಪಾಲಿಸಿ ವರ್ಷದ ಮುಗಿಯುತ್ತಿರುವ ಪ್ರೀಮಿಯಂ ಮೇಲೆ ರಿಯಾಯಿತಿ ನೀಡಲಾಗುತ್ತದೆ.

iv. ಒಂದು ವೇಳೆ ವಿಮಾದಾರನು ಪಾಲಿಸಿ ನವೀಕರಿಸುವಾಗ ಹೆಚ್ಚಿನ ಪಾಲಿಸಿ ಅವಧಿಯನ್ನು ಆರಿಸಿಕೊಂಡಲ್ಲಿ, ರಿಯಾಯಿತಿ ಈ ಕೆಳಕಂಡಂತೆ ಇರುತ್ತದೆ:–

   a. 2/3 ವರ್ಷದ ಪಾಲಿಸಿ ಅವಧಿಯ ಮೊದಲ ಪಾಲಿಸಿ ವರ್ಷದ ಮೇಲೆ (ಪ್ರಸ್ತುತ ಪಾಲಿಸಿ ಒಂದು ವರ್ಷದ್ದಾಗಿದ್ದರೆ), ಹಾಗೂ

   b. 3 ವರ್ಷ ಪಾಲಿಸಿ ಅವಧಿಯ ಮೊದಲ ಮತ್ತು ಎರಡನೇ ಪಾಲಿಸಿ ವರ್ಷದ ಮೇಲೆ (ಪ್ರಸ್ತುತ ಪಾಲಿಸಿ ಅವಧಿ 2 ವರ್ಷದ್ದಾಗಿದ್ದರೆ)

v. ನವೀಕರಿಸುವಾಗ ವಿಮಾದಾರನು ಕಡಿಮೆ ಪಾಲಿಸಿ ಅವಧಿಯನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ, ಅವಧಿ ರಿಯಾಯಿತಿಗೆ ಮುಂಚಿನ ಪೂರ್ಣ ವರ್ಷಕ್ಕೆ ರಿಯಾಯಿತಿ ಅನ್ವಯವಾಗುತ್ತದೆ.

ಕ್ಲೇಮ ಕಾರ್ಯಕ್ರಮದ ವಿವರವಾದ ನಿಯಮ ಮತ್ತು ಷರತ್ತುಗಳು ಹಾಗೂ ಹಕ್ಕುನಿರಾಕರಣೆಗಳನ್ನು ತಿಳಿಯಲು ದಯವಿಟ್ಟು ಪಾಲಿಸಿಯನ್ನು ಓದಿ

**II. ಆರೋಗ್ಯ ನೆರವು:**

ಆರೋಗ್ಯ ಸಂಬಂಧಿ ಯಾವುದೇ ಪ್ರಶ್ನೆಗಳಿಗೆ ಸಮರ್ಪಕ ಸ್ಪಂದನೆ ನೀಡುವ ಮೂಲಕ ನಮ್ಮ ಆರೋಗ್ಯ ನೆರವು ತಂಡ (ಎಚ್‌ಎಟಿ) ನಿಮ್ಮ ಆರೋಗ್ಯ ಸ್ಥಿತಿಯನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ನಿಮಗೆ ಸಹಾಯ ಮಾಡಲಿದೆ.

ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುವುದು:

- ವೈದ್ಯ/ತಜ್ಞವೈದ್ಯರನ್ನು ಹುಡುಕಲು
- ಆಸ್ಪತ್ರೆ ಬೆಡ್‌ಗಳ ಲಭ್ಯತೆ
- ಸಹಾಯಕರು/ಶುಶ್ರೂಷಕರ ನೇಮಕದ ಬಗ್ಗೆ ಮಾರ್ಗದರ್ಶನ
- ಸಂಚಾರಿ ಸಹಾಯ, ದೈನಂದಿನ ಜೀವನದ ಸಹಾಯ, ವೈದ್ಯಕೀಯ ಸಲಕರಣೆಗಳು, ಇತ್ಯಾದಿಗಳನ್ನು ಹೊಂದಿಸಿಕೊಳ್ಳಲು ಅನುಕೂಲ
- ನಮ್ಮ ತಜ್ಞರ ತಂಡದ ಯಾವುದೇ ವೈದ್ಯರ ಭೇಟಿಗೆ ಸಮಯ ನಿಗದಿಗೊಳಿಸುವುದು
- ಮತ್ತೊಬ್ಬ ತಜ್ಞರ ಅಭಿಪ್ರಾಯ ಪಡೆಯಲು ಸಮಯ ನಿಗದಿಗೊಳಿಸುವುದು
- ಆಸ್ಪತ್ರೆಗಳ ಆಯ್ಕೆ ಬಗ್ಗೆ ಸರಿಯಾದ ಅಭಿಪ್ರಾಯ ಒದಗಿಸುವುದು ಹಾಗೂ ಎಲ್ಲೆಲ್ಲಿ ನಗದುರಹಿತ ವ್ಯವಹಾರ ಸಾಧ್ಯ ಎಂಬುದನ್ನು ತಿಳಿಸುವುದು
- ನಮ್ಮ ತಂಡದ ಡಯಾಗ್ನೋಸ್ಟಿಕ್ ಲ್ಯಾಬ್‌ಗಳ ಭೇಟಿಗೆ ಸಮಯ ನಿಗದಿಪಡಿಸುವುದು
- ಔಷಧಗಳನ್ನು ಮನೆಬಾಗಿಲಿಗೆ ತಂದುಕೊಡುವ ಸೌಲಭ್ಯದ ಬಗ್ಗೆ ಮಾಹಿತಿ, ಸಹಾಯ ಒದಗಿಸುವುದು
- ತೊಂದರೆಗಳ ತಡೆಗಟ್ಟುವಿಕೆ ಬಗ್ಗೆ ಮಾಹಿತಿ ನೀಡುವುದು
- ಮನೆಯಲ್ಲಿ ಫಿಜಿಯೋಥೆರಪಿ/ಶುಶ್ರೂಷೆ ಪಡೆದುಕೊಳ್ಳುವಂತಹ, ಆಸ್ಪತ್ರೀಕರಣದ ನಂತರ ತೆಗೆದುಕೊಳ್ಳಬೇಕಾದ ಕಾಳಜಿ

ದಯವಿಟ್ಟು ಗಮನಿಸಿ, ಈ ಸುರಕ್ಷೆಯಡಿ ಒದಗಿಸುವ ಸೇವೆಗಳು ಸಹಾಯಕ್ಕಾಗಿ ಮಾತ್ರ, ಹಾಗೂ ವೈದ್ಯರ ಭೇಟಿ/ಸಮಾಲೋಚನೆಗೆ ಬದಲಿ ವ್ಯವಸ್ಥೆ ಎಂದು ಅರ್ಥೈಸಿಕೊಳ್ಳಬಾರದು. ನಮ್ಮ ಮೊಬೈಲ್ ಅಪ್ಲಿಕೇಷನ್ನಲ್ಲಿ ಈ ಸೇವೆ ಲಭ್ಯವಿದೆ ಅಥವಾ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಸೋಮವಾರದಿಂದ ಶನಿವಾರದವರೆಗೆ ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ 040–66274205 ಸಂಖ್ಯೆಗೆ ಕರೆ ಮಾಡಬಹುದು (ದಯವಿಟ್ಟು ಗಮನಿಸಿ, ಈ ಸಂಖ್ಯೆ ಬದಲಾಗಬಹುದು).

ಆರೋಗ್ಯ ನೆರವು ಪಡೆದುಕೊಳ್ಳುವ ಬಗ್ಗೆ ವಿವರವಾದ ನಿಯಮ ಮತ್ತು ಷರತ್ತುಗಳು ಹಾಗೂ ಹಕ್ಕುನಿರಾಕರಣೆಗಳನ್ನು ತಿಳಿಯಲು ದಯವಿಟ್ಟು ಪಾಲಿಸಿಯನ್ನು ಓದಿ

**III. ಆಂಬ್ಯುಲೆನ್ಸ್ ನೆರವು:**

ವಿಮಾದಾರರನ್ನು ಅಪಘಾತ/ಅನಾರೋಗ್ಯ/ಗಾಯ ಆದ ಜಾಗದಿಂದ ಹತ್ತಿರದ ಆಸ್ಪತ್ರೆ ಅಥವಾ ಯಾವುದೇ ಕ್ಲಿನಿಕ್ ಅಥವಾ ನರ್ಸಿಂಗ್ ಹೋಂಗೆ ವೈದ್ಯಕೀಯ ಚಿಕಿತ್ಸೆಗಾಗಿ ಆಂಬ್ಯುಲೆನ್ಸ್ ಮೂಲಕ ಕರೆದೊಯ್ಯಲು ನಾವು ನೆರವು ಒದಗಿಸುತ್ತೇವೆ. ಆಸ್ಥಳ/ನಗರದಲ್ಲಿ ನಗದುರಹಿತ ವ್ಯವಹಾರ ಲಭ್ಯವಿರುವ ಬಗ್ಗೆ ಸಹ ಗಮನಿಸಲಾಗುವುದು. ಸೇವೆ ದೊರೆಯುವ ನಗರ/ಸ್ಥಳಗಳ ಪಟ್ಟಿಗಾಗಿ ದಯವಿಟ್ಟು ನಮ್ಮ ವೆಬ್ಸೈಟ್ಗೆ ಭೇಟಿ ನೀಡಿ

ಆಂಬ್ಯುಲೆನ್ಸ್ ನೆರವು ಪಡೆಯುವ ಪ್ರಕ್ರಿಯೆ:

i. ಈ ಕೆಳಕಂಡ ನಮ್ಮ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದಲ್ಲಿ, ನಮ್ಮ ಗ್ರಾಹಕ ಸೇವಾ ಪ್ರತಿನಿಧಿ (ಸಿಎಸ್‌ಇ) ನಿಮ್ಮನ್ನು ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳುವ ಮೂಲಕ ಪರಿಸ್ಥಿತಿಯನ್ನು ಅರಿತು ಅಗತ್ಯ ನೆರವು ನೀಡುತ್ತಾರೆ.

ii. ಅಗತ್ಯವಿದ್ದಲ್ಲಿ ನಿಮ್ಮ ಕರೆಯನ್ನು ತಜ್ಞ ವೈದ್ಯರಿಗೆ ತಲುಪಿಸಿ, ಅವರು ನಿಮ್ಮ ಅಗತ್ಯವನ್ನು ಅರಿತು ನಿಮಗೆ ಹೆಚ್ಚಿನ ಅನುಕೂಲ ಹೊಂದಿರುವ ಆಂಬ್ಯುಲೆನ್ಸ್ನನ್ನು ಒದಗಿಸುವ ಬಗ್ಗೆ ನಿರ್ಧರಿಸುತ್ತಾರೆ.

iii. ಸೇವೆ ಪಡೆಯಲು ಈ ಕೆಳಕಂಡ ವಿವರಗಳನ್ನು ನೀಡಬೇಕಾಗುತ್ತದೆ:

   a) ಹೆಲ್ತ್ ಕಾರ್ಡ್ನಲ್ಲಿ ಇರುವಂತೆ ನಿಮ್ಮ ಯುಐಎಚ್ಡಿ

   b) ನಿಮ್ಮ ಸಂಪರ್ಕ ಸಂಖ್ಯೆ

   c) ನಿಮ್ಮ ಸ್ಥಳ

**IV. ಸೇವೆಗಳು/ಉತ್ಪನ್ನಗಳ ಮೇಲೆ ರಿಯಾಯಿತಿ:**

ತಪಾಸಣೆ/ಡಯಾಗ್ನೋಸ್ಟಿಕ್ ಪರೀಕ್ಷೆಗಳು/ಪ್ರಯೋಗಾಲಯ ಪರೀಕ್ಷೆಗಳು/

ಆರೋಗ್ಯ ಪೂರಕಗಳು/ ವೈದ್ಯಕೀಯ ಸಲಕರಣೆ/ ಗೃಹ ಆರೈಕೆ ಸೇವೆಗಳು/ ವಾಸ್ತವಿಕ ಆರೋಗ್ಯ & ಕ್ಷೇಮ ಅವಧಿಗಳು/ ಆಯುಷ್ ಉತ್ಪನ್ನಗಳು/ ಸದೃಢತೆ & ಕ್ಷೇಮ ಸಂಬಂಧಿತ ಚಟುವಟಿಕೆಗಳು & ಉತ್ಪನ್ನಗಳು, ಇತ್ಯಾದಿಗಳನ್ನು ನಮ್ಮ ತಜ್ಞರ ತಂಡದ ಡಯಾಗ್ನಾಸ್ಟಿಕ್ ಕೇಂದ್ರಗಳಲ್ಲಿ ಮಾಡಿಸಲು, ನಮ್ಮ ಸಂಪರ್ಕಜಾಲದ ಔಷಧಾಲಯಗಳಲ್ಲಿ ಔಷಧ ಖರೀದಿಸಲು ಸಹ ನಾವು ರಿಯಾಯಿತಿ ಒದಗಿಸುತ್ತೇವೆ. ಈ ರಿಯಾಯಿತಿಗಳನ್ನು ನಮ್ಮ ಮೊಬೈಲ್ ಅಪ್ಲಿಕೇಷನ್ನಲ್ಲಿ ನೋಡಬಹುದು ಹಾಗೂ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾದ ರಿಯಾಯಿತಿಗಳನ್ನು ಲಭ್ಯತೆಯ ಆಧಾರದ ಮೇಲೆ ಪಡೆದುಕೊಳ್ಳಬಹುದು.

**ಮುಂದೆ, ಹೆಚ್ಚುವರಿ ಪ್ರೀಮಿಯಂ ಪಾವತಿಸಿದರೆ, ಪಾಲಿಸಿಯಡಿ ಐಚ್ಛಿಕ ಸುರಕ್ಷೆ 19ನ್ನು ಹೊರತುಪಡಿಸಿ ಈ ಕೆಳಗಿನ ಐಚ್ಛಿಕ ಸುರಕ್ಷೆಗಳನ್ನು ನೀಡಬಹುದು. ಸ್ವಯಂಪ್ರೇರಿತ ಸಹ-ಪಾವತಿ ಹಾಗೂ ಐಚ್ಛಿಕ ಸಂಖ್ಯೆ 20, ಸ್ವಯಂಪ್ರೇರಿತ ಡಿಡಕ್ಟಬಲ್, ಐಚ್ಛಿಕ ಸುರಕ್ಷೆ 29, ಸಂಪರ್ಕಜಾಲ ಅನುಕೂಲ, ಐಚ್ಛಿಕ ಸುರಕ್ಷೆ 30, ಎನ್ಆರ್ಐ ಅನುಕೂಲ- ಎನ್ಆರ್ಐಗಳಿಗಾಗಿ ಆಕಸ್ಮಿಕ ತುರ್ತು ಸುರಕ್ಷೆ.**

**ಈ ವಿಭಾಗಕ್ಕೆ ರೀಸೆಟ್ ಸೌಲಭ್ಯ/ ಆಸ್ಪತ್ರೀಕರಣಪೂರ್ವ ವೈದ್ಯಕೀಯ ವೆಚ್ಚಗಳು/ ಆಸ್ಪತ್ರೀಕರಣದ ನಂತರದ ವೈದ್ಯಕೀಯ ವೆಚ್ಚಗಳು ಅನ್ವಯಿಸುವುದಿಲ್ಲ. ಈ ವಿಭಾಗದಡಿ ಸಲ್ಲಿಸುವ ಕ್ಲೇಮುಗಳಿಂದ ವಾರ್ಷಿಕ ವಿಮಾ ಮೊತ್ತದ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ (ಐಚ್ಛಿಕ ಸುರಕ್ಷೆ 10ನ್ನು ಹೊರತುಪಡಿಸಿ. ಕ್ಲೇಮ್ ರಕ್ಷಕ ಹಾಗೂ ಐಚ್ಛಿಕ ಸುರಕ್ಷೆ 1. ಅಮಿತ ಕಾಳಜಿ) ಅಥವಾ ಲಾಯಲ್ಟಿ ಬೋನಸ್ (ಐಚ್ಛಿಕ ಸುರಕ್ಷೆ 1. ಅಮಿತ ಕಾಳಜಿ ಹೊರತುಪಡಿಸಿ)**

**ಪ್ರತಿ ಐಚ್ಛಿಕ ಸುರಕ್ಷೆಗಳ ವಿಮಾ ಮೊತ್ತ (ಐಚ್ಛಿಕ ಸುರಕ್ಷೆ 10 ಹೊರತುಪಡಿಸಿ. ಪಾಲಿಸಿಯ ವಾರ್ಷಿಕ ವಿಮಾ ಮೊತ್ತ ಅಲ್ಲದೆ, ಕ್ಲೇಮ್ ರಕ್ಷಕ, ಐಚ್ಛಿಕ ಸುರಕ್ಷೆ 22, ದೀರ್ಘಕಾಲದ ವೈದ್ಯಕೀಯ ಸುರಕ್ಷೆಗಳು ಇರಲಿವೆ.**

**B. ಆಡ್-ಆನ್/ ಐಚ್ಛಿಕ ಸುರಕ್ಷೆ**

**1.** ಅಮಿತ ಕಾಳಜಿ: ಪಾಲಿಸಿಯ ಅವಧಿಯೊಳಗೆ ವಿಮಾದಾರ ಯಾವುದೇ ಒಳರೋಗಿ ಚಿಕಿತ್ಸೆ/ ಡೇಕೇರ್ ಪ್ರಕ್ರಿಯೆ/ ಚಿಕಿತ್ಸೆ/ ಆಯುಷ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ಅದಕ್ಕೆ ತಗುಲಿದ ಖರ್ಚನ್ನು ವಾರ್ಷಿಕ ವಿಮಾ ಮೊತ್ತದ ಮಿತಿ ಇಲ್ಲದೆ ನಾವು ಭರಿಸುತ್ತೇವೆ. ಈ ಸೌಕರ್ಯಕ್ಕೆ ಕೆಳಕಂಡ ಷರತ್ತುಗಳು ಅನ್ವಯಿಸುತ್ತವೆ:

i. ಈ ಐಚ್ಛಿಕ ಸುರಕ್ಷೆಯನ್ನು ಪಡೆದುಕೊಳ್ಳಲು ಇರುವ ಕಾಲಾವಕಾಶವನ್ನು 2 ಪಾಲಿಸಿ ವರ್ಷಗಳಿಗೆ ಮಿತಿಗೊಳಿಸಲಾಗಿದೆ (ಪಾಲಿಸಿ ಅವಧಿಯನ್ನು ಲೆಕ್ಕಿಸದೆ)

a. ಪಾಲಿಸಿ ಅವಧಿಯು ಒಂದು ವರ್ಷದ್ದಾಗಿದ್ದರೆ ಹಾಗೂ ಒಂದು ವರ್ಷದ್ದಾಗಿಯೇ ನವೀಕರಣಗೊಳಿಸಿದ್ದರೆ, ವಿಮಾದಾರ ಪಾಲಿಸಿಯ ಆರಂಭದಲ್ಲಿ ಅಥವಾ ಮೊದಲ ನವೀಕರಣದ ಸಮಯದಲ್ಲಿ ಈ ಸುರಕ್ಷೆಯನ್ನು ಆರಿಸಿಕೊಳ್ಳಬಹುದು. ಎರಡನೇ ನವೀಕರಣದಲ್ಲಿ ಈ ಸುರಕ್ಷೆಯನ್ನು ಹೊಂದುವುದು ಸಾಧ್ಯವಾಗುವುದಿಲ್ಲ.

b. ಪಾಲಿಸಿ ಅವಧಿಯು 2 ಅಥವಾ 3 ವರ್ಷಗಳಾಗಿದ್ದಲ್ಲಿ ಈ ಸುರಕ್ಷೆಯ ಅನುಕೂಲ ಪಡೆದುಕೊಳ್ಳಲು ಇದನ್ನು ಪಾಲಿಸಿಯ ಆರಂಭದಲ್ಲೇ ಆಯ್ಕೆ ಮಾಡಿಕೊಳ್ಳಬೇಕು

ii. ಪಾಲಿಸಿಯ ಅವಧಿ ಅಥವಾ ವಿಧ (ವೈಯಕ್ತಿಕ ಅಥವಾ ಫ್ಲೋಟರ್) ಯಾವುದೇ ಇರಲಿ, ಪಾಲಿಸಿಯ ಅವಧಿಯಲ್ಲಿ ಒಂದು ಬಾರಿ ಮಾತ್ರ ಈ ಸುರಕ್ಷೆಯಡಿ ಕ್ಲೇಮು ಸಲ್ಲಿಸಲು ಸಾಧ್ಯ ಹಾಗೂ ಮೂಲ ಸುರಕ್ಷೆಯಡಿ ಮಾತ್ರ ಸ್ವೀಕಾರಾರ್ಹ.ಒಳರೋಗಿ ಚಿಕಿತ್ಸೆ ಅಥವಾ ಮೂಲ ಸುರಕ್ಷೆ ಡೇಕೇರ್ ಪ್ರಕ್ರಿಯೆ/ ಚಿಕಿತ್ಸೆ ಅಥವಾ ಮೂಲ ಸುರಕ್ಷೆ 6. ಒಳರೋಗಿ ಆಯುಷ್ ಆಸ್ಪತ್ರೀಕರಣ. ಮೇಲ್ಕಂಡ ಮೂಲ ಸುರಕ್ಷೆಗಳಿಗೆ ಅನ್ವಯಿಸುವ ಎಲ್ಲಾ ಷರತ್ತುಗಳು ಈ ಐಚ್ಛಿಕ ಸುರಕ್ಷೆಗೆ ಅನ್ವಯಿಸುತ್ತವೆ.

iii. ಒಮ್ಮೆ ಆಯ್ಕೆ ಮಾಡಿಕೊಂಡ ಬಳಿಕ, ಒಂದು ಕ್ಲೇಮು ಸಲ್ಲಿಸುವವರೆಗೂ ವಿಮಾದಾರ ನಿರಂತರವಾಗಿ ಈ ಐಚ್ಛಿಕ ಸುರಕ್ಷೆಯನ್ನು ಆರಿಸಿಕೊಳ್ಳುತ್ತಿರಬೇಕು. ಒಮ್ಮೆ ವಿಮಾದಾರ ತನ್ನ ಆಯ್ಕೆಯನ್ನು ರದ್ದುಗೊಳಿಸಿದಲ್ಲಿ, ಮತ್ತೆ ಇದೇ ಸುರಕ್ಷೆಯನ್ನು ಆಯ್ಕೆ ಮಾಡಲಾಗುವುದಿಲ್ಲ.

iv. ಈ ಐಚ್ಛಿಕ ಸುರಕ್ಷೆಯಡಿ ಒಮ್ಮೆ ಕ್ಲೇಮು ಸಲ್ಲಿಸಿದಲ್ಲಿ, ಸುರಕ್ಷೆ ಅಲ್ಲಿಗೆ ಕೊನೆಗೊಳ್ಳುತ್ತದೆ ಹಾಗೂ ನಂತರದ ನವೀಕರಣದಲ್ಲಿ ಈ ಸುರಕ್ಷೆಯ ಮರು ಆಯ್ಕೆ ಸಾಧ್ಯವಿಲ್ಲ.

v. ಈ ಐಚ್ಛಿಕ ಸುರಕ್ಷೆಯಡಿ ಕ್ಲೇಮು ಸಲ್ಲಿಸಿದಲ್ಲಿ ಒಟ್ಟು ವಿಮಾ ಮೊತ್ತ (ವಾರ್ಷಿಕ ವಿಮಾ ಮೊತ್ತ + ಲಾಯಲ್ಟಿ ಬೋನಸ್ (ಸೇರಿಸಿದ್ದಲ್ಲಿ) + ಪರ್ವ ಬೂಸ್ಟರ್ (ಆರಿಸಿಕೊಂಡು, ಸೇರಿಸಿದ್ದಲ್ಲಿ) + ಹಣದುಬ್ಬರ ರಕ್ಷಕ (ಆರಿಸಿಕೊಂಡು, ಸೇರಿಸಿದ್ದಲ್ಲಿ)ವನ್ನು ಈ ಕೆಳಗಿನ ಅನುಕ್ರಮದಲ್ಲಿ ಬಳಸಬೇಕು:–

1. ವಾರ್ಷಿಕ ವಿಮಾ ಮೊತ್ತ
2. ಲಾಯಲ್ಟಿ ಬೋನಸ್
3. ಪವರ್ ಬೂಸ್ಟರ್
4. ಹಣದುಬ್ಬರ ರಕ್ಷಕ

vi. ಮೇಲ್ಕಾಣಿಸಿದ ಎಲ್ಲಾ ವಿಮಾ ಮೊತ್ತವನ್ನು ಬಳಸಿದ ಬಳಿಕ, ಒಟ್ಟು ವಿಮಾ ಮೊತ್ತವನ್ನು ಆ ಪಾಲಿಸಿ ವರ್ಷಕ್ಕೆ ಅಮಿತ ಸುರಕ್ಷೆಯಡಿ ಪಾವತಿಸಿದ ಕ್ಲೇಮನ್ನು ಆಧರಿಸಿ ಸೊನ್ನೆಗೆ ಇಳಿಸಬೇಕು.

vii. ವಿಮಾದಾರನು ಆಯ್ಕೆ ಮಾಡಿದ್ದಲ್ಲಿ, ಐಚ್ಛಿಕ ಸುರಕ್ಷೆ 19. ಸ್ವಯಂಪ್ರೇರಿತ ಸಹ–ಪಾವತಿ ಅಥವಾ ಐಚ್ಛಿಕ ಸುರಕ್ಷೆ 20. ಸ್ವಯಂಪ್ರೇರಿತ ಡಿಡಕ್ಟಬಲ್ ಈ ಸುರಕ್ಷೆಯಡಿ ಅನ್ವಯಿಸುತ್ತವೆ.

viii. ಐಚ್ಛಿಕ ಸುರಕ್ಷೆ 9ರ ಅಡಿ ಸಲ್ಲಿಸಿದ ಕ್ಲೇಮುಗಳಿಗೆ, ವಿಶ್ವಾದ್ಯಂತ ಸುರಕ್ಷೆ, ಮೂಲ ಸುರಕ್ಷೆ 13, ಬಾಡಿಗೆ ತಾಯಂದಿರ ಒಳರೋಗಿ ಆಸ್ಪತ್ರೀಕರಣ, ಮೂಲ ಸುರಕ್ಷೆ 14, ಅಂಡಾಣು ದಾನಿಗಳ ಆಸ್ಪತ್ರೀಕರಣ ಹಾಗೂ ಅನಿಯಮಿತ ವಿಮಾ ಮೊತ್ತದ ಆಯ್ಕೆ ಹೊಂದಿರುವ ಪಾಲಿಸಿಗಳಿಗೆ ಈ ಸುರಕ್ಷೆ ಅನ್ವಯಿಸುವುದಿಲ್ಲ.

ix. ವಿಮಾದಾರ ಐಚ್ಛಿಕ ಸುರಕ್ಷೆ 27ರ ಅನ್ವಯ ಕೊಠಡಿ ಮಾರ್ಪಾಡನ್ನು ಆರಿಸಿಕೊಂಡಿಲ್ಲದ ಪಕ್ಷದಲ್ಲಿ, ಈ ಸುರಕ್ಷೆಯಡಿ ಕೊಠಡಿ ಪ್ರವರ್ಗವು ಸಿಂಗಲ್ ಪ್ರೈವೇಟ್ ಎಸಿ ಕೊಠಡಿ ದರ್ಜೆಯದ್ದಾಗಿರುತ್ತದೆ.

**2.** **ಪರ್ವ ಬೂಸ್ಟರ್ (ಸೂಪರ್ ಲಾಯಲ್ಟಿ ಬೋನಸ್):** ನೀವು ಈ ಐಚ್ಛಿಕ ಸುರಕ್ಷೆಯನ್ನು ಆರಿಸಿಕೊಂಡಿದ್ದಲ್ಲಿ ಪಾಲಿಸಿ ವರ್ಷದಲ್ಲಿ ಕ್ಲೇಮು ಮಾಡಿರಲಿ, ಇಲ್ಲದಿರಲಿ, ಪಾಲಿಸಿ ವರ್ಷದ ಕೊನೆಯಲ್ಲಿ ಮುಗಿಯುತ್ತಿರುವ ಅಥವಾ ನವೀಕರಣಗೊಂಡ ವಾರ್ಷಿಕ ವಿಮಾ ಮೊತ್ತ (ಯಾವುದು ಕಡಿಮೆಯೋ ಅದು)ದ ಮೇಲೆ ಶೇ.100ರ ಲಾಯಲ್ಟಿ ಬೋನಸ್ ನೀಡುತ್ತೇವೆ. ಆದರೆ ಪಾಲಿಸಿಯನ್ನು ನಿರಂತರವಾಗಿ ನಮ್ಮಿಂದ ನವೀಕರಿಸಿಕೊಂಡಿರಬೇಕು. ಅನಿಯಮಿತ ವಿಮಾ ಮೊತ್ತದವರೆಗೆ ಪರ್ವ ಬೂಸ್ಟರ್ನ್ನು ಕ್ರೋಢೀಕರಿಸಬಹುದು. ಆದರೆ, ಈ ಐಚ್ಛಿಕ ಸುರಕ್ಷೆಯು ಅನಿಯಮಿತ ವಿಮಾ ಮೊತ್ತ ಹೊಂದಿರುವ ಪಾಲಿಸಿಗಳಿಗೆ ಅನ್ವಯಿಸುವುದಿಲ್ಲ. ನವೀಕರಣದ ಸಮಯದಲ್ಲಿ ನೀವು ಈ ಸುರಕ್ಷೆಯ ಆಯ್ಕೆಯನ್ನು ರದ್ದುಗೊಳಿಸಿದಲ್ಲಿ, ಪರ್ವ ಬೂಸ್ಟರ್ನಡಿ ಅಲ್ಲಿಯವರೆಗೆ ಕ್ರೋಢೀಕೃತವಾದ ಬೋನಸ್ ಸೊನ್ನೆಗೆ ಇಳಿಯುತ್ತದೆ. ಲಾಯಲ್ಟಿ ಬೋನಸ್ಗೆ ಅನ್ವಯಿಸುವ ಎಲ್ಲಾ ಷರತ್ತುಗಳು ಈ ಸುರಕ್ಷೆಗೂ ಅನ್ವಯಿಸುತ್ತವೆ.

3. **ಜಂಪ್‌ಸ್ಟಾರ್ಟ್:** ವಿಮಾದಾರ(ರು) ವಿಮಾ ಅವಧಿ ಆರಂಭಗೊಂಡ 31ನೇ ದಿನದಿಂದ ಈ ಕೆಳಕಂಡ ಕಾಯಿಲೆಗಳು/ಅನಾರೋಗ್ಯ/ಸ್ಥಿತಿ ಕಾರಣದಿಂದ ಆಸ್ಪತ್ರೀಕರಣಗೊಂಡಿದ್ದರೆ, ಅದಕ್ಕೆ ತಗಲುವ ಖರ್ಚನ್ನು ಕಂಪನಿ ಭರಿಸುತ್ತದೆ. ಅದಕ್ಕೆ ಈ ಕೆಳಕಂಡ ಷರತ್ತುಗಳು ಅನ್ವಯಿಸುತ್ತವೆ:

   i. ಕಾಯಿಲೆಗಳು/ಅನಾರೋಗ್ಯ/ಸ್ಥಿತಿ ಬಗ್ಗೆ ವಿಮಾದಾರ ಕಂಪನಿಗೆ ಘೋಷಿಸಿರಬೇಕು ಹಾಗೂ ಅದನ್ನು ನಾವು ಪಾಲಿಸಿಯ ಆರಂಭದಲ್ಲಿ ಒಪ್ಪಿ ಪಾಲಿಸಿ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಿರಬೇಕು, ಅಥವಾ

   ii. ಪಾಲಿಸಿಗೆ ಮುಂಚಿನ ವೈದ್ಯಕೀಯ ತಪಾಸಣೆಯಲ್ಲಿ ಕಾಯಿಲೆ/ಅನಾರೋಗ್ಯ/ ಸ್ಥಿತಿ ಪತ್ತೆಯಾಗಿ, ಅದನ್ನು ನಾವು ಒಪ್ಪಿರಬೇಕು

   iii. ಪಾಲಿಸಿ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಿರುವಂತೆ ಹೆಚ್ಚುವರಿ ಪ್ರೀಮಿಯಂ ಪಾವತಿಸಿ, ಆಯ್ಕೆ ಮಾಡಿಕೊಂಡ ವಿಮಾದಾರರಿಗೆ ಮಾತ್ರ ಮೇಲ್ಕಂಡ 30 ದಿನಗಳ ನಿರೀಕ್ಷಾ ಅವಧಿಯನ್ನು ಕಡಿತಗೊಳಿಸಲಾಗುವುದು

   iv. ವೈಯಕ್ತಿಕ ಮೂಲ ಪಾಲಿಸಿಯಲ್ಲಿ ಈ ಐಚ್ಛಿಕ ಸುರಕ್ಷೆಯು ವೈಯಕ್ತಿಕ ಆಧಾರದಲ್ಲಿ ಅನ್ವಯಿಸುತ್ತದೆ. ಫ್ಲೋಟರ್ ಮೂಲ ಪಾಲಿಸಿಯಲ್ಲಿ, ಐಚ್ಛಿಕ ಸುರಕ್ಷೆಯು ಫ್ಲೋಟರ್ ಆಧಾರದ ಮೇಲೆ ಅನ್ವಯಿಸುತ್ತದೆ,

   v. ಪಾಲಿಸಿಯ ಆರಂಭದಲ್ಲಿ ಅಥವಾ ಮೂಲ ಪಾಲಿಸಿಯ ನವೀಕರಣದ ಸಮಯದಲ್ಲಿ ಹೊಸ ಸದಸ್ಯರನ್ನು ಸೇರ್ಪಡೆಗೊಳಿಸಿದಾಗ ಈ ಸುರಕ್ಷೆ ಲಭ್ಯವಾಗುತ್ತದೆ.

   vi. ಮೂಲ ವಿಮಾ ಮೊತ್ತದಲ್ಲಿ ಹೆಚ್ಚಳ– ನವೀಕರಣದ ಸಮಯದಲ್ಲಿ ಮೂಲ ವಿಮಾ ಮೊತ್ತ ಹೆಚ್ಚಿಸಿದರೆ, ಆ ಹೆಚ್ಚುವರಿ ಮೊತ್ತದ ಮೇಲೆ 30 ದಿನಗಳ ನಿರೀಕ್ಷಣಾ ಕಾಲ ಅನ್ವಯಿಸುತ್ತದೆ. (ಮಾದರಿ ವಿವರಣೆಯನ್ನು ನೋಡಿರಿ)

| ವಾರ್ಷಿಕ ವಿಮಾ ಮೊತ್ತ | ವಿಮಾ ಮೊತ್ತದ ಮೇಲೆ ಅನ್ವಯಿಸುವ ಜಂಪ್‌ಸ್ಟಾರ್ಟ್ | ನವೀಕರಣದಲ್ಲಿ ವಾರ್ಷಿಕ ವಿಮಾ ಮೊತ್ತವನ್ನು ರೂ. 20 ಲಕ್ಷಕ್ಕೆ ಹೆಚ್ಚಿಸಲಾಗಿದೆ | ಪರಿಷ್ಕೃತ ವಾರ್ಷಿಕ ವಿಮಾ ಮೊತ್ತ | ವಿಮಾ ಮೊತ್ತದ ಮೇಲೆ ಅನ್ವಯಿಸುವ ಜಂಪ್‌ಸ್ಟಾರ್ಟ | ಏರಿಕೆಯಾದ ವಿಮಾ ಮೊತ್ತಕ್ಕೆ ಅನ್ವಯಿಸುವ ನಿರೀಕ್ಷಾ ಅವಧಿ |
|---|---|---|---|---|---|
| ರೂ. 15 ಲಕ್ಷ | ರೂ. 15 ಲಕ್ಷ | | ರೂ. 20 ಲಕ್ಷ | ರೂ. 20 ಲಕ್ಷ | ರೂ. 5 ಲಕ್ಷ |

   vii. ಒಮ್ಮೆ ಆರಿಸಿಕೊಂಡರೆ, ಈ ಐಚ್ಛಿಕ ಸುರಕ್ಷೆಯನ್ನು 3 ನಿರಂತರ ಪಾಲಿಸಿ ವರ್ಷಗಳಿಗೆ ಆಯ್ಕೆ ಮಾಡಬೇಕಾಗುತ್ತದೆ.

   viii. ವಿಮಾದಾರ(ರು) ಈ ಐಚ್ಛಿಕ ಸುರಕ್ಷೆಯನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ, ಮುಂಚೆ ಇದ್ದ ಕಾಯಿಲೆಗಳನ್ನು ಒಳಗೊಳ್ಳದಿರುವುದು (ಕೋಡ್– ಎಕ್ಸ್ಕ್ಲ01) ಎಂಬ ಆಯ್ಕೆ ಅನ್ವಯಿಸುವುದಿಲ್ಲ.

   30 ದಿನಗಳ ಈ ಇಳಿಕೆಯಾದ ನಿರೀಕ್ಷಾ ಅವಧಿಯು ಐಚ್ಛಿಕ ಸುರಕ್ಷೆ 9ರ ಅಡಿ ಸಲ್ಲಿಸಿದ ಕ್ಲೇಮುಗಳಿಗೆ ಅನ್ವಯಿಸುವುದಿಲ್ಲ, ವಿಶ್ವದಾದ್ಯಂತದ ಸುರಕ್ಷೆ

   ಈ ಐಚ್ಛಿಕ ಸುರಕ್ಷೆಯ ಅಡಿ ಸೇರುವ ಕಾಯಿಲೆಗಳು/ಅನಾರೋಗ್ಯ/ ಸ್ಥಿತಿಗಳ ಪಟ್ಟಿ

   1. ಅಸ್ತಮಾ
   2. ಮಧುಮೇಹ
   3. ರಕ್ತದೊತ್ತಡ
   4. ಹೈಪರ್ಲಿಪಿಡೇಮಿಯ
   5. ಸ್ಥೂಲಕಾಯ
   6. ಪರಿಧಮನಿಯ ಅಪಧಮನಿ ಕಾಯಿಲೆ (1 ವರ್ಷಕ್ಕೆ ಮುನ್ನ ನಡೆಸಿದ ಪಿಟಿಸಿಎ)

4. **ದೀರ್ಘಕಾಲೀನ ಕಾಯಿಲೆ ನಿರ್ವಹಣಾ ಕಾರ್ಯಕ್ರಮ (ನಗದುರಹಿತ ಆಧಾರದ ಮೇಲೆ ಮಾತ್ರ):** ಪಟ್ಟಿಯಲ್ಲಿನ ಯಾವುದೇ ಕಾಯಿಲೆ/ಅನಾರೋಗ್ಯ/ಸ್ಥಿತಿಯ ಬಗ್ಗೆ ವಿಮಾದಾರ(ರು) ಘೋಷಿಸಿದ್ದಲ್ಲಿ – ಅಸ್ತಮಾ, ಮಧುಮೇಹ, ರಕ್ತದೊತ್ತಡ, ಹೈ ಪರ್ಲಿಪಡೇಮಿಯ, ಸ್ಥೂಲಕಾಯ, ಹಾಗೂ/ಅಥವಾ ಪರಿಧಮನಿಯ ಅಪಧಮನಿ ಕಾಯಿಲೆ (1 ವರ್ಷಕ್ಕೆ ಮುನ್ನ ನಡೆಸಿದ ಪಿಟಿಸಿಎ)– ಮತ್ತು ಅದನ್ನು ನಾವು ಒಪ್ಪಿದ್ದಲ್ಲಿ, ವಿಮಾದಾರರು ನಮ್ಮ ದೀರ್ಘಕಾಲೀನ ಕಾಯಿಲೆ ನಿರ್ವಹಣಾ ಕಾರ್ಯಕ್ರಮದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಈ ಕಾರ್ಯಕ್ರಮವು ನಮ್ಮ ತಜ್ಞರ ತಂಡದಲ್ಲಿನ ಸೇವಾ ಪೂರೈಕೆದಾರರಿಂದ ನಗದುರಹಿತ ವ್ಯವಹಾರದ ಮೂಲಕ ಮಾತ್ರ ಪಡೆದುಕೊಳ್ಳಬೇಕು.

   ಈ ಕಾರ್ಯಕ್ರಮದ ಭಾಗವಾಗಿ, ನಾವು ವಿಮಾದಾರ(ರಿ)ಗೆ ಈ ಕೆಳಕಂಡ ಸೇವೆಗಳನ್ನು ಒದಗಿಸುತ್ತೇವೆ–

   i. ನಮ್ಮ ತಜ್ಞರ ತಂಡದ ವೈದ್ಯರ ಮೂಲಕ ವಿಮಾದಾರರು ತಮ್ಮ ಆರೋಗ್ಯವನ್ನು ಗಮನಿಸಲು ನೆರವು ಹಾಗೂ ಆರೋಗ್ಯವನ್ನು ನಿರ್ವಹಿಸುವ/ಉತ್ತಮಗೊಳಿಸುವ ನಿಟ್ಟಿನಲ್ಲಿ ಮಾರ್ಗದರ್ಶನ.

   ii. ಅವರ ಆರೋಗ್ಯ ಸ್ಥಿತಿಗೆ ತಕ್ಕಂತೆ ಪಥ್ಯಪರಿಣತರು ಮತ್ತು ಪೌಷ್ಠಿಕಾಂಶ ಸಮಾಲೋಚನೆ ಪಡೆಯಲು ನೆರವು

   iii. ಮೊದಲೇ ತಿಳಿಸಿದಂತೆ ಪಟ್ಟಿಯಲ್ಲಿ ತಿಳಿಸಿದ ಸ್ಥಿತಿಗಳಿಗೆ ತಲಾ 6 ತಿಂಗಳ ಅಂತರದಲ್ಲಿ 2 ಆರೋಗ್ಯ ತಪಾಸಣೆಗಳು. ಆರೋಗ್ಯ ತಪಾಸಣೆಯನ್ನು ಆರಿಸಿಕೊಂಡಿದ್ದಲ್ಲಿ ಐಚ್ಛಿಕ ಸುರಕ್ಷೆ 16ರ ಜೊತೆಗೆ ಈ ಆರೋಗ್ಯ ತಪಾಸಣೆ ನಡೆಸಲಾಗುವುದು

   iv. ತಂಬಾಕು/ಮದ್ಯಸೇವನೆತ್ಯಜಿಸುವಂತಹಜೀವನಶೈಲಿಮಾರ್ಪಾಡು ಮಾಡಿಕೊಳ್ಳಲು ಆಪ್ತಸಮಾಲೋಚನೆ ಪಡೆದುಕೊಳ್ಳಲು ನೆರವು

   ಈ ಕಾರ್ಯಕ್ರಮವು ಕೆಳಕಂಡ ಷರತ್ತುಗಳಿಗೆ ಒಳಪಡುತ್ತದೆ–

   1. ಪಾಲಿಸಿದಾರರು ಈ ಕೆಳಕಂಡ ಕಾಯಿಲೆ/ಸ್ಥಿತಿ ಹೊಂದಿರುವ ಬಗ್ಗೆ ಘೋಷಿಸಿಕೊಂಡು, ಮುಂಚೆ ಇದ್ದ ಕಾಯಿಲೆ ಎಂದು ಅದು ನಮ್ಮಿಂದ ಒಪ್ಪಿತವಾಗಿದ್ದಲ್ಲಿ, ವಿಮಾದಾರ(ರು) ಈ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳಬೇಕು:
      i. ಅಸ್ತಮಾ
      ii. ಮಧುಮೇಹ
      iii. ರಕ್ತದೊತ್ತಡ
      iv. ಹೈಪರ್ಲಿಪಿಡೇಮಿಯ
      v. ಸ್ಥೂಲಕಾಯ
      vi. ಪರಿಧಮನಿಯ ಅಪಧಮನಿ ಕಾಯಿಲೆ (1 ವರ್ಷಕ್ಕೆ ಮುನ್ನ ನಡೆಸಿದ ಪಿಟಿಸಿಎ)

   2. ನಮ್ಮ ಮೊಬೈಲ್ ಅಪ್ಲಿಕೇಷನ್ ಮೂಲಕ ಅಥವಾ ನಮ್ಮ ಶುಲ್ಕರಹಿತ ಫೋನ್ ಸಂಖ್ಯೆ 1800 2666ಗೆ ಕರೆ ಮಾಡುವ ಮೂಲಕ ಕೇವಲ ನಗದುರಹಿತ ಆಧಾರದ ಮೇಲೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬಹುದು

   3. ಈ ಸುರಕ್ಷೆಯಡಿ ಆರೋಗ್ಯ ತಪಾಸಣೆ ಕುರಿತು ವಿಮಾದಾರರ ಮನವಿ ಮೇರೆಗೆ ನಾವು ಸಂಪರ್ಕಜಾಲ ಪೂರೈಕೆದಾರ/ಆರೋಗ್ಯ ಸೇವೆ ಪೂರೈಕೆದಾರರನ್ನು ನಿಯೋಜಿಸುತ್ತೇವೆ.

   4. ಆರೋಗ್ಯ ತಪಾಸಣೆಯನ್ನು ಬಳಸಿಕೊಳ್ಳುವುದರಿಂದ ವಾರ್ಷಿಕ ವಿಮಾ ಮೊತ್ತದ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ

   5. ಈ ಐಚ್ಛಿಕ ಸುರಕ್ಷೆಗೆ ಅನುಗುಣವಾದ ಪ್ರೀಮಿಯಂ ಪಾವತಿಸುವ ಮೂಲಕ ವಿಮಾದಾರ ಈ ಕಾರ್ಯಕ್ರಮಕ್ಕೆ ಸಹ ನೋಂದಾಯಿಸಿಕೊಳ್ಳಬಹುದು, ಆದರೆ ಯಾವುದೇ ದೀರ್ಘಕಾಲೀನ ಅನಾರೋಗ್ಯ ಹೊಂದಿರುವ ಬಗ್ಗೆ ವಿಮಾದಾರರು

6. 18 ವರ್ಷ ಹಾಗೂ ಮೇಲ್ಪಟ್ಟ ವಯಸ್ಸಿನ ವಿಮಾದಾರರಿಗೆ ಈ ಕಾರ್ಯಕ್ರಮ ಲಭ್ಯ.

7. ಹಿರಿಯರ ಕಾಳಜಿ ಮೌಲ್ಯವರ್ಧಿತ ಸೇವೆಗಳ ಅಡಿ ನೀಡುವ ಯಾವುದೇ ಸುರಕ್ಷೆ/ಸೇವೆಗಳು ಈ ಸುರಕ್ಷೆಯಲ್ಲಿ ಸೇರ್ಪಡೆಯಾಗುವುದಿಲ್ಲ(ನಗದುರಹಿತ ಆಧಾರದ ಮೇಲೆ ಮಾತ್ರ)

**ಗಮನಿಸಿ:** ಯಾವುದೇ ಸಂಪರ್ಕಜಾಲ ಪೂರೈಕೆದಾರ/ ತಜ್ಞರ ತಂಡದ ಸೇವಾ ಪೂರೈಕೆದಾರರನ್ನು ಬದಲಾಯಿಸುವ, ಸೇರಿಸುವ, ಅಥವಾ ಮಿತಿಗೊಳಿಸುವ ನಮ್ಮ ಹಕ್ಕನ್ನು ಕಾಯ್ದಿರಿಸಲಾಗಿದೆ.

ನಾವು ಈ ಕಾರ್ಯಕ್ರಮವನ್ನು ಆರೋಗ್ಯ ಸಂಬಂಧಿ ಸಂಯುಕ್ತ ಕಾಳಜಿ ನಿರ್ವಹಣೆಗಾಗಿ ವೈದ್ಯಕೀಯ ಅಭಿವೃದ್ಧಿಗೆ ಅನುಗುಣವಾಗಿ ಇತರ ದೀರ್ಘಕಾಲೀನ ಕಾಯಿಲೆ/ಸ್ಥಿತಿಗೂ ಈ ಸುರಕ್ಷೆಯಡಿ ವಿಸ್ತರಿಸಬಹುದು.

**5. ತಾಯ್ತನ ಪ್ರಯೋಜನ:**

i. ಈ ಐಚ್ಛಿಕ ಪ್ರಯೋಜನ ಸುರಕ್ಷೆಯು ವಾರ್ಷಿಕ ವಿಮಾ ಮೊತ್ತದ ಶೇ.10ರಷ್ಟು ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತದೆ. ಇದು ರೂ. 1 ಲಕ್ಷ (ತಾಯ್ತನ ವಿಮಾ ಮೊತ್ತ)ದ ಗರಿಷ್ಠ ಮಿತಿ ಹೊಂದಿದ್ದು ಮಗುವಿನ ಜನನ ಹಾಗೂ/ಅಥವಾ ಜೀವಕ್ಕೆ ಅಪಾಯ ಎದುರಾದ ಸಂದರ್ಭದಲ್ಲಿ ಮಾತ್ರ ವೈದ್ಯರ ಸಲಹೆ ಮೇರೆಗೆ ಕಾನೂನುಬದ್ಧವಾಗಿ ಮಾಡುವ ಗರ್ಭಪಾತಕ್ಕೆ ಬೇಕಾಗುವ ಖರ್ಚನ್ನು ಭರಿಸಲಾಗುತ್ತದೆ. ಈ ಸೌಲಭ್ಯವು ಮಹಿಳಾ ವಿಮಾದಾರರ ಜೀವಿತಾವಧಿಯ ಗರಿಷ್ಠ ಮೂರು ಹೆರಿಗೆಗಳಿಗೆ ಅಥವಾ ಗರ್ಭಪಾತಗಳಿಗೆ ದೊರೆಯಲಿದ್ದು ವಿಮಾದಾರ ಮಹಿಳೆ 18ರಿಂದ 50 ವರ್ಷದೊಳಗಿನವರಾಗಿರಬೇಕು.

ii. ಪ್ರಸವ-ಪೂರ್ವ (ಗರ್ಭಧಾರಣೆಯಿಂದ ಮಗುವಿನ ಜನನದವರೆಗಿನ ಕಾಲ) ಹಾಗೂ ಪ್ರಸವಾನಂತರ (ಮಗು ಜನಿಸಿದ ದಿನದಿಂದ 30 ದಿನಗಳ ಕಾಲ) ಬೇಕಾಗುವ ಖರ್ಚುಗಳನ್ನು ಮೇಲೆ ತಿಳಿಸಿದ ಮಿತಿಗಳೊಳಗೆ ಭರಿಸಲಾಗುವುದು (ವಾರ್ಷಿಕ ವಿಮಾ ಮೊತ್ತದ ಶೇ.10ರಷ್ಟು, ರೂ.1 ಲಕ್ಷದ ಗರಿಷ್ಠ ಮಿತಿಯೊಂದಿಗೆ), ಆದರೆ ಇದು ಒಳರೋಗಿ ವಿಭಾಗದಲ್ಲಿನ ವೆಚ್ಚವಾಗಿರಬೇಕು.

iii. ಈ ಸುರಕ್ಷೆಯನ್ನು ಆಯ್ಕೆ ಮಾಡಿದಾಗಿನಿಂದ 24 ತಿಂಗಳುಗಳ ನಿರೀಕ್ಷಾ ಅವಧಿಯನ್ನು ಈ ಅನುಕೂಲ ಹೊಂದಿರುತ್ತದೆ.

iv. ಈ ಸುರಕ್ಷೆಯು ಕೌಟುಂಬಿಕ ಫ್ಲೋಟರ್ ಪಾಲಿಸಿಗೆ ಮಾತ್ರ ಸಿಗುತ್ತದೆ. ನೀವು ಹಾಗೂ ನಿಮ್ಮ ಸಂಗಾತಿ ಇಬ್ಬರೂ ಒಂದೇ ಕೌಟುಂಬಿಕ ಫ್ಲೋಟರ್ ಪಾಲಿಸಿಯಡಿ ಪಾಲಿಸಿದಾರರಾಗಿದ್ದರೆ ನಿಮ್ಮಿಬ್ಬರಿಗೂ ಈ ಪಾಲಿಸಿಯಡಿ ಸುರಕ್ಷೆ ದೊರೆಯುತ್ತದೆ ಹಾಗೂ ಮಹಿಳಾ ವಿಮಾದಾರರು 18ರಿಂದ 50 ವರ್ಷದೊಳಗಿನವರಾಗಿರಬೇಕು.

v. ತಾಯ್ತನ ಐಚ್ಛಿಕ ಪ್ರಯೋಜನ ಆರಿಸಿಕೊಳ್ಳದೆ ವಿಮಾದಾರರು ಪಾಲಿಸಿ ತೆಗೆದುಕೊಂಡಿದ್ದು ತಾಯ್ತನ ಐಚ್ಛಿಕ ಪ್ರಯೋಜನವನ್ನು ಆರಿಸಿಕೊಳ್ಳಲು ಬಯಸಿದಲ್ಲಿ ನವೀಕರಣದ ಸಮಯದಲ್ಲಿ ಇದನ್ನು ಪಡೆದುಕೊಳ್ಳಬಹುದು.

vi. ಅಪಸ್ಥಾನೀಯ ಗರ್ಭಧಾರಣೆಯ ನಿರ್ವಹಣೆಗೆ ತಗುಲಿದ ಯಾವುದೇ ವೈದ್ಯಕೀಯ ಖರ್ಚು ಈ ಸುರಕ್ಷೆಯಲ್ಲಿ ಒಳಪಡುವುದಿಲ್ಲ, ಇದರ ಸಂಬಂಧಿತ ಕ್ಲೇಮನ್ನು ಒಳರೋಗಿ ಚಿಕಿತ್ಸೆಯಲ್ಲಿ ಸಲ್ಲಿಸಬಹುದು.

vii. ಭಾರತದ ಭೌಗೋಳಿಕ ಗಡಿಯಾಚೆ ಈ ತಾಯ್ತನ ಪ್ರಯೋಜನ ದೊರೆಯುವುದಿಲ್ಲ.

**6. ನವಜಾತ ಶಿಶು ಸುರಕ್ಷೆ:**

i. ಪಾಲಿಸಿ ಅವಧಿಯ ಪ್ರತಿ ಪಾಲಿಸಿ ವರ್ಷದಲ್ಲಿ ನವಜಾತ ಶಿಶುವಿನ ಆಸ್ಪತ್ರೀಕರಣದ ವೈದ್ಯಕೀಯ ಖರ್ಚನ್ನು ತಾಯ್ತನ ವಿಮಾ ಮೊತ್ತದ ಎರಡರಷ್ಟರ ಮಿತಿಯಲ್ಲಿ ನಾವು ಭರಿಸುತ್ತೇವೆ. ತಾಯ್ತನ ವಿಮಾ ಮೊತ್ತದ ಜೊತೆಗೆ ಈ ಮಿತಿ ಸೇರ್ಪಟ್ಟಿದೆ.

ii. ನೀವು ತಾಯ್ತನ ಸುರಕ್ಷೆಯನ್ನು ಆಯ್ಕೆ ಮಾಡಿದ್ದು ಪಾಲಿಸಿಯ ತಾಯ್ತನ ಸುರಕ್ಷೆಯಡಿ ಕ್ಲೇಮನ್ನು ಒಪ್ಪಿಕೊಂಡಲ್ಲಿ ಮಾತ್ರ ಈ ಆಡ್-ಆನ್/ಐಚ್ಛಿಕ ಸುರಕ್ಷೆ ಲಭ್ಯವಾಗುತ್ತದೆ.

iii. ನವಜಾತ ಶಿಶುವಿನ ಆಸ್ಪತ್ರೀಕರಣದ ವೈದ್ಯಕೀಯ ಖರ್ಚನ್ನು ಮಗು ಜನಿಸಿದಾಗಿನಿಂದ ಗರಿಷ್ಠ 90 ದಿನಗಳ ಅವಧಿಯಲ್ಲಿ ಈ ಐಚ್ಛಿಕ ಸುರಕ್ಷೆಯಡಿ ಭರಿಸಲಾಗುವುದು (ಕನಿಷ್ಠ 24 ನಿರಂತರ ಗಂಟೆಗಳ ಕಾಲ)

**7. ಮೊದಲ ವರ್ಷದಲ್ಲಿ ಮಗುವಿನ ಲಸಿಕೆ:**

i. ಪಾಲಿಸಿ ಅವಧಿಯಲ್ಲಿ ಮಗುವಿನ ಒಂದು ವರ್ಷದವರೆಗಿನ ಲಸಿಕೆಗಳ ಖರ್ಚನ್ನು ವಾರ್ಷಿಕ ವಿಮಾ ಮೊತ್ತದ ಶೇ.1ರಷ್ಟನ್ನು ರೂ.10,000 ಗರಿಷ್ಠ ಮಿತಿಯೊಂದಿಗೆ ನಾವು ಭರಿಸುತ್ತೇವೆ. ತಾಯ್ತನ ವಿಮಾ ಮೊತ್ತದ ಜೊತೆಗೆ ಈ ಮಿತಿ ಸೇರ್ಪಟ್ಟಿದೆ.

ii. ಐಚ್ಛಿಕ ಸುರಕ್ಷೆ 5ರ ಅಡಿ ತಾಯ್ತನ ಸುರಕ್ಷೆ ಹಾಗೂ ಐಚ್ಛಿಕ ಸುರಕ್ಷೆ 6ರ ಅಡಿ ನವಜಾತ ಶಿಶು ಸುರಕ್ಷೆಯನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ ಹಾಗೂ ನಾವು ಅದನ್ನು ಒಪ್ಪಿಕೊಂಡಿದ್ದಲ್ಲಿ ಮಾತ್ರ ಈ ಸುರಕ್ಷೆ ದೊರೆಯಲಿದೆ.

**8. ಬೀಫಿಟ್:** ಬೀಫಿಟ್ ಸುರಕ್ಷೆಯಡಿಯ ಎಲ್ಲಾ ಪ್ರಯೋಜನಗಳನ್ನು ನಗದುರಹಿತ ರೀತಿಯಲ್ಲಿ ನಮ್ಮ ಮೊಬೈಲ್ ಅಪ್ಲಿಕೇಷನ್ ಮೂಲಕ ಮಾತ್ರ ಪಡೆದುಕೊಳ್ಳಬಹುದು. ಎಲ್ಲಾ ಸೇವೆಗಳನ್ನು ನಮ್ಮ ತಜ್ಞರ ತಂಡದ ಆರೋಗ್ಯ ಸೇವಾ ಪೂರೈಕೆದಾರರ ಮೂಲಕ, ಸಮಾಲೋಚನೆಗೆ ಸಮಯ ನಿಗದಿಪಡಿಸುವ ಸಮಯದಲ್ಲಿನ ಲಭ್ಯತೆಯ ಆಧಾರದ ಮೇಲೆ ಒದಗಿಸಲಾಗುವುದು. ಬೀಫಿಟ್ ಸುರಕ್ಷೆಯನ್ನು ವಿಮಾದಾರರು ತಮ್ಮ 65 ವರ್ಷ ವಯಸ್ಸಿನವರೆಗೆ ಆಯ್ಕೆ ಮಾಡಿಕೊಳ್ಳಬಹುದು. ಈ ಸುರಕ್ಷೆಗೆ 30 ದಿನಗಳ ನಿರೀಕ್ಷಾ ಅವಧಿ ಅನ್ವಯಿಸುತ್ತದೆ. ಬಳಕೆಯಾಗದ ಯಾವುದೇ ಸಮಾಲೋಚನೆ/ ಇ-ಸಮಾಲೋಚನೆ/ ಅವಧಿಗಳನ್ನು ನಂತರದ ವರ್ಷಕ್ಕೆ ಮುಂದೊಯ್ಯಲು ಸಾಧ್ಯವಿಲ್ಲ.

ಈ ಕೆಳಕಂಡ ಪ್ರಯೋಜನಗಳು ಪಾಲಿಸಿ ಷೆಡ್ಯೂಲ್ನಲ್ಲಿ ನಮೂದಿಸಿರುವಂತೆ ಸೂಕ್ತ ಮಿತಿಯೊಳಗೆ ಲಭ್ಯವಿರುತ್ತವೆ

i. ನೇರ ಸಮಾಲೋಚನೆ

ii. ವಾಡಿಕೆಯ ಡಯಾಗ್ನಾಸ್ಟಿಕ್ ಹಾಗೂ ಸಣ್ಣ ವಿಧಾನಗಳ ಸುರಕ್ಷೆ

iii. ಔಷಧಾಲಯ ಸುರಕ್ಷೆ

iv. ಫಿಸಿಯೋಥೆರಪಿ ಅವಧಿಗಳು

v. ಇ-ಸಮಾಲೋಚನೆ

vi. ಪಥ್ಯ ಮತ್ತು ಪೌಷ್ಠಿಕಾಂಶ ಇ-ಸಮಾಲೋಚನೆ

**ಬೀಫಿಟ್ನಡಿ ದೊರೆಯುವ ಪ್ಲಾನ್ಗಳು**

| ಸುರಕ್ಷೆ | ವಿವರಗಳು | ಪ್ಲಾನ್ಗಳು | | | | | | |
|---|---|---|---|---|---|---|---|---|
| | | A | B | C | D | E | F | G |
| ಹೊರರೋಗಿ ಸಮಾಲೋಚನೆ | ಸಮಾಲೋಚನೆಗಳ ಲೆಕ್ಕ | 1 | 2 | 4 | 6 | 8 | 10 | 12 |
| ವಾಡಿಕೆಯ ಡಯಾಗ್ನಾಸ್ಟಿಕ್ ಸುರಕ್ಷೆ ಮತ್ತು ಸಣ್ಣ ವಿಧಾನಗಳ ಸುರಕ್ಷೆ | ವಿಮಾ ಮೊತ್ತ (ಐಎನ್ಆರ್) | 500 | 1000 | 1000 | 2000 | 3000 | 5000 | 7500 |
| ಔಷಧಾಲಯ ಸುರಕ್ಷೆ | ವಿಮಾ ಮೊತ್ತ (ಐಎನ್ಆರ್) | 500 | 1000 | 1000 | 2000 | 3000 | 5000 | 7500 |
| ಫಿಸಿಯೋಥೆರಪಿ ಅವಧಿ | ಅವಧಿಗಳ ಲೆಕ್ಕ | 0 | 0 | 6 | 8 | 10 | 12 | 12 |
| ಇ-ಸಮಾಲೋಚನೆ | ಅವಧಿಗಳ ಲೆಕ್ಕ | 6 | 6 | 6 | 8 | 12 | ಅನಿಯಮಿತ | ಅನಿಯಮಿತ |
| ಪಥ್ಯ ಹಾಗೂ ಪೌಷ್ಠಿಕಾಂಶ ಇ-ಸಮಾಲೋಚನೆ | ಅವಧಿಗಳ ಲೆಕ್ಕ | 6 | 6 | 6 | 8 | 12 | ಅನಿಯಮಿತ | ಅನಿಯಮಿತ |




**ಬೀಫಿಟ್ನಡಿ ಕ್ಲೇಮ್ ಪ್ರಕ್ರಿಯೆ**

9. **ವಿಶ್ವದಾದ್ಯಂತ ಸುರಕ್ಷೆ (ನಗದುರಹಿತ ಮಾತ್ರ):** ವಿಮಾದಾರನ ಆಸ್ಪತ್ರೀಕರಣ ಖರ್ಚನ್ನು, ವಾರ್ಷಿಕ ವಿಮಾ ಮೊತ್ತದಷ್ಟು ಹಾಗೂ ರೂ.3 ಕೋಟಿ ಗರಿಷ್ಠ ಮಿತಿಯೊಂದಿಗೆ ಭಾರತದ ಹೊರಗಿನ ಯೋಜಿತ ಆಸ್ಪತ್ರೀಕರಣ ಹಾಗೂ ಯುಎಸ್ಎ ಮತ್ತು ಕೆನಡಾ ಒಳಗೊಂಡಂತೆ ವಿಶ್ವದಾದ್ಯಂತ ಆಸ್ಪತ್ರೀಕರಣದ ಖರ್ಚನ್ನು ನಾವು ಭರಿಸುತ್ತೇವೆ. ಈ ಕೆಳಕಂಡ ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ:

   i. ಈ ಸುರಕ್ಷೆಯ ವಿಮಾ ಮೊತ್ತ ವಾರ್ಷಿಕ ವಿಮಾ ಮೊತ್ತಕ್ಕೆ ಹೆಚ್ಚುವರಿಯಾಗಿರುತ್ತದೆ

   ii. 65 ವರ್ಷ ವಯಸ್ಸಿನವರೆಗಿನ ವಿಮಾದಾರ(ರು) ಮತ್ತು ಭಾರತದ ನಿವಾಸಿ(ಗಳು) ಮತ್ತು ಪಾಲಿಸಿ ಪಡೆಯುವ ಸಮಯದಲ್ಲಿ ಭಾರತದ ಭೌಗೋಳಿಕ ಗಡಿಯಲ್ಲಿ ಇದ್ದವರು ಮಾತ್ರ ಈ ಸುರಕ್ಷೆ ಪಡೆಯಬಹುದು.

   iii. ಈ ಐಚ್ಛಿಕ ಸುರಕ್ಷೆಯಡಿ ಪಡೆಯುವ ಚಿಕಿತ್ಸೆಯನ್ನು ಸೂಕ್ತ ಕಾನೂನು, ಆ ಪ್ರದೇಶ ಅಥವಾ ದೇಶದ ನಿಯಮಗಳು ಹಾಗೂ/ಅಥವಾ ನಿಬಂಧನೆಗಳಡಿ ಮಾನ್ಯತೆ ಪಡೆದ ಹಾಗೂ ತಜ್ಞರ ತಂಡದ ಸಂಪರ್ಕಜಾಲ ಪೂರೈಕೆದಾರರಾದ ಆಸ್ಪತ್ರೆ ಅಥವಾ ಕ್ಲಿನಿಕ್ನಲ್ಲಿ ಮಾತ್ರ ಪಡೆಯಬೇಕು. (ಸಂಪರ್ಕಜಾಲ ಪೂರೈಕೆದಾರರ ಸಂಪೂರ್ಣ ಪಟ್ಟಿ ವೀಕ್ಷಿಸಲು ನಮ್ಮ ವೆಬ್ಸೈಟ್ www.icicilombard.com ಗೆ ಭೇಟಿ ನೀಡಿ ಅಥವಾ ನಮ್ಮ ಶುಲ್ಕರಹಿತ ಸಂಖ್ಯೆ 1800 2666 ಮೂಲಕ ಕರೆ ಮಾಡಿ ವಿವರ ಪಡೆದುಕೊಳ್ಳಿ).

   iv. ನಮ್ಮ ಸಂಪರ್ಕಜಾಲ/ತಜ್ಞರ ತಂಡದ ಸೇವಾ ಪೂರೈಕೆದಾರರ ಮೂಲಕ ಕೇವಲ ನಗದುರಹಿತ ಆಧಾರದ ಮೇಲೆ ಮಾತ್ರ ಈ ಸುರಕ್ಷೆ ಲಭ್ಯವಿದೆ.

   ಈ ಸುರಕ್ಷೆಯಡಿ ಯಾವುದೇ ಕ್ಲೇಮಿಗೆ 2 ವರ್ಷಗಳ ನಿರೀಕ್ಷಾ ಅವಧಿ ಇರುತ್ತದೆ. ಆಕಸ್ಮಿಕ ತುರ್ತು ಪರಿಸ್ಥಿತಿಗಳಿಗೆ ಯಾವುದೇ ನಿರೀಕ್ಷಾ ಅವಧಿ ಇರುವುದಿಲ್ಲ. ಪಾಲಿಸಿಗೆ ಯಾವುದೇ ಹೊಸ ಸದಸ್ಯರ ಸೇರ್ಪಡೆಯಾದಲ್ಲಿ, ಅವರು ವಿಶ್ವದಾದ್ಯಂತ ಸುರಕ್ಷೆಯಡಿ ಯಾವುದೇ ಸುರಕ್ಷೆ ಪಡೆಯಲು 2 ವರ್ಷಗಳ ನಿರೀಕ್ಷಾ ಅವಧಿ ಪೂರ್ಣಗೊಳಿಸಬೇಕು. ನವೀಕರಣದ ಸಮಯದಲ್ಲಿ ವಿಮಾ ಮೊತ್ತವನ್ನು ಹೆಚ್ಚಿಸಿದಲ್ಲಿ, ಹೆಚ್ಚಳವಾದ ವಿಮಾ ಮೊತ್ತಕ್ಕೆ ಹೊಸ ನಿರೀಕ್ಷಾ ಅವಧಿ ಅನ್ವಯವಾಗುತ್ತದೆ.

   v. ಯೋಜಿತ ಆಸ್ಪತ್ರೀಕರಣದ ಸಂದರ್ಭದಲ್ಲಿ, ಪ್ರಯಾಣದ ಕನಿಷ್ಠ 7 ದಿನಗಳ ಮುಂಚೆ ನಮಗೆ/ನಮ್ಮ ತಜ್ಞರ ತಂಡದ ಸೇವಾ ಪೂರೈಕೆದಾರರಿಗೆ ಮಾಹಿತಿ ನೀಡಬೇಕು ಹಾಗೂ ಅದಕ್ಕೆ ನಮ್ಮ ಒಪ್ಪಿಗೆ ಅಗತ್ಯ.

   vi. ಒಂದು ಪ್ರವಾಸದಲ್ಲಿ 45 ನಿರಂತರ ದಿನಗಳ ಅವಧಿಗೆ ಈ ಸುರಕ್ಷೆ ಲಭ್ಯವಿದ್ದು, ಒಟ್ಟಾರೆ ಒಂದು ಪಾಲಿಸಿ ವರ್ಷದಲ್ಲಿ 90 ದಿನಗಳ ಕಾಲ ಸುರಕ್ಷೆ ಪಡೆಯಬಹುದು. ಪ್ರಯಾಣದ ದಿನದಿಂದ 45 ದಿನಗಳ ನಂತರದ ಯಾವುದೇ ಖರ್ಚನ್ನು ಭರಿಸಲಾಗುವುದಿಲ್ಲ.

   vii. ಈ ಸುರಕ್ಷೆಯಡಿ ಒಳರೋಗಿ ಆಸ್ಪತ್ರೀಕರಣ ಖರ್ಚು, ಒಳರೋಗಿ ಆಯುಷ್ ಆಸ್ಪತ್ರೀಕರಣ ಖರ್ಚು, ಡೇಕೇರ್ ಪ್ರಕ್ರಿಯೆ/ಚಿಕಿತ್ಸಾ ಖರ್ಚು ಮಾತ್ರ ಸೇರಿವೆ

   viii. ಆಸ್ಪತ್ರೀಕರಣದ ಮುಂಚೆ ಹಾಗೂ ನಂತರದ ವೈದ್ಯಕೀಯ ಖರ್ಚುಗಳು, ಹೊರರೋಗಿ ಚಿಕಿತ್ಸೆ ಅಥವಾ ಈ ಪಾಲಿಸಿಯಡಿ ಬೇರೆ ಯಾವುದೇ ಮೂಲ ಸುರಕ್ಷೆಗಳು/ಐಚ್ಛಿಕ ಸುರಕ್ಷೆಗಳು ವಿಶ್ವದಾದ್ಯಂತ ಸುರಕ್ಷೆಯಡಿ ಒಳಗೊಳ್ಳುವುದಿಲ್ಲ

   ix. ಯಾವುದೇ ಕ್ಲೇಮಿನ ಪಾವತಿಯು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಟಿಸಿದ ನಷ್ಟಉಂಟಾದ ದಿನದಂದಿನ ವಿನಿಮಯ ದರವನ್ನು ಆಧರಿಸಿರುತ್ತದೆ ಹಾಗೂ ಕ್ಲೇಮಿನ ಪಾವತಿಯನ್ನು ವಿದೇಶಿ ಹಣವನ್ನು ಭಾರತೀಯ ಹಣವಾಗಿ ಬದಲಾಯಿಸಿಕೊಳ್ಳಲು ಬಳಸಬೇಕು. ಒಂದು ವೇಳೆ ನಷ್ಟದ ದಿನದಂದು ಆರ್‌ಬಿಐ ದರವನ್ನು ಪ್ರಕಟಿಸದೆ ಇದ್ದಲ್ಲಿ, ಮುಂದಿನ ಪ್ರಕಟಣೆಯಲ್ಲಿನ ವಿನಿಮಯ ದರವನ್ನು ಪರಿಗಣಿಸಲಾಗುವುದು.

   x. ಲಾಯಲ್ಟಿ ಬೋನಸ್/ ಪರ್ವ ಬೂಸ್ಟರ್/ ಹಣದುಬ್ಬರ ರಕ್ಷಕ (ಇದ್ದಲ್ಲಿ) ಅಡಿ ಲಭ್ಯವಿರುವವಯಾವುದೇ ಹೆಚ್ಚುವರಿ ವಿಮಾ ಮೊತ್ತ ವಿಶ್ವದಾದ್ಯಂತ ಸುರಕ್ಷೆಯಡಿ ಸಿಗುವುದಿಲ್ಲ ಹಾಗೂ ವಾರ್ಷಿಕ ವಿಮಾ ಮೊತ್ತದಷ್ಟು ಆಸ್ಪತ್ರೀಕರಣ/ಡೇಕೇರ್ ವೆಚ್ಚಗಳನ್ನು ಮಾತ್ರ ಈ ಪಾಲಿಸಿಯಡಿ ಭರಿಸಲಾಗುವುದು.

   xi. ತಾಯ್ತನ ಪ್ರಯೋಜನ, ಜಂಪ್‌ಸ್ಟಾರ್ಟ್, ಪರ್ವ ಬೂಸ್ಟರ್, ಅಮಿತ ಕಾಳಜಿ, ರೀಸೆಟ್ ಅನುಕೂಲ, ಹಾಗೂ ಕ್ಲೇಮ್ ರಕ್ಷಕಗಳು ವಿಶ್ವದಾದ್ಯಂತ ಸುರಕ್ಷೆಯಡಿ ಸಿಗುವುದಿಲ್ಲ.

   xii. ಋಣಾತ್ಮಕವಾಗಿ ಪಟ್ಟಿಮಾಡಿದ ದೇಶಗಳು ಹಾಗೂ ಋಣಾತ್ಮಕ ಭೂಪ್ರದೇಶ ಹೊಂದಿರುವ ದೇಶಗಳನ್ನು ವಿಶ್ವದಾದ್ಯಂತ ಸುರಕ್ಷೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಋಣಾತ್ಮಕವಾಗಿ ಪಟ್ಟಿಮಾಡಿದ ದೇಶಗಳು ಹಾಗೂ ಋಣಾತ್ಮಕ ಭೂಪ್ರದೇಶ ಹೊಂದಿರುವ ದೇಶಗಳೆಂದರೆ, ಆರ್ಥಿಕ ಕಾರ್ಯಾಚರಣೆಯ ಕಾರ್ಯಪಡೆ (ಎಫ್ ಎಟಿಎಫ್) ಬೂದು ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿಸಿರುವ ದೇಶಗಳು/ ಗಡಿಗಳು/ ಭೂಪ್ರದೇಶಗಳು. ನವೀಕರಿಸಿದ ಪಟ್ಟಿಗಾಗಿ https://www.fatf&gafi.org/en/countries/black &and&greylists.html ವೆಬ್‌ಸೈಟ್‌ಗೆ ಭೇಟಿ ನೀಡಿ

   **ಗಮನಿಸಿ:** ಯಾವುದೇ ಸಂಪರ್ಕಜಾಲ ಪೂರೈಕೆದಾರ/ ತಜ್ಞರ ತಂಡದ ಸೇವಾ ಪೂರೈಕೆದಾರರನ್ನು ನಗದುರಹಿತ ಸೌಕರ್ಯಗಳಿಗಾಗಿ ಬದಲಾಯಿಸುವ, ಸೇರಿಸುವ, ಅಥವಾ ಮಿತಿಗೊಳಿಸುವ ಕಂಪನಿಯ ಹಕ್ಕನ್ನು ಕಾಯ್ದಿರಿಸಲಾಗಿದೆ. ವಿಮಾದಾರರು ಆಗಾಗ್ಗೆ ಸಂಪರ್ಕಜಾಲ ಪೂರೈಕೆದಾರ/ತಜ್ಞರ ತಂಡದ ಸೇವಾ ಪೂರೈಕೆದಾರರ ನವೀಕರಿಸಿದ

ಪಟ್ಟಿಯನ್ನು ನಮ್ಮ ವೆಬ್‌ಸೈಟ್ www.icicilombard.com ನಲ್ಲಿ ಪರಿಶೀಲಿಸಬೇಕು.

10. **ಕ್ಲೇಮ್ ರಕ್ಷಕ:** ಒಳರೋಗಿ ಆಸ್ಪತ್ರೀಕರಣ ಸುರಕ್ಷೆಯಡಿ ಅಥವಾ ಡೇ-ಕೇರ್ ಪ್ರಕ್ರಿಯೆ/ ಚಿಕಿತ್ಸೆಯಡಿ ಒಂದು ಕ್ಲೇಮು ಸ್ವೀಕಾರವಾಗಿದ್ದರೆ, ಐಆರ್‌ಡಿಎ ಪ್ರಕಟಿಸಿದ ಪಟ್ಟಿಯಲ್ಲಿ ಕ್ಲೇಮಿನಲ್ಲಿ ಪಾವತಿ ಮಾಡಲಾಗದು ಎಂದು ಹೊರಗಿಡಲಾದ ಸಂಗತಿಗಳು ಇಲ್ಲಿ ಪಾವತಿಗೆ ಅರ್ಹವಾಗುತ್ತವೆ. ಈ ಸೌಲಭ್ಯದಡಿ ಪಾವತಿಸಬಹುದಾದ ಗರಿಷ್ಠ ಮೊತ್ತವು ನಿಮ್ಮ ಪಾಲಿಸಿಯ ವಾರ್ಷಿಕ ವಿಮಾ ಮೊತ್ತದ ದರಕ್ಕೆ ಸೀಮಿತಗೊಳ್ಳುತ್ತದೆ. ಈ ಆಡ್-ಆನ್/ ಐಚ್ಛಿಕ ಸುರಕ್ಷೆಯಡಿಯ ಕ್ಲೇಮುಗಳು ಭಾರತದ ಭೌಗೋಳಿಕ ಗಡಿಯೊಳಗೆ ಪಡೆದ ಚಿಕಿತ್ಸೆಗಾಗಿ ಆಗಿರಬೇಕು. ಹಾಗಾಗಿ, ಐಚ್ಛಿಕ ಸುರಕ್ಷೆ 9ರ ವಿಶ್ವದಾದ್ಯಂತ ಸುರಕ್ಷೆಗೆ ಈ ಸುರಕ್ಷೆ ಒಳಪಡುವುದಿಲ್ಲ. ಲಾಯಲ್ಟಿ ಬೋನಸ್/ ಪವರ್ ಬೂಸ್ಟರ್/ಹಣದುಬ್ಬರ ರಕ್ಷಕ/ರೀಸೆಟ್ ಸೌಲಭ್ಯಗಳಲ್ಲಿ ಸಿಗುವ ಯಾವುದೇ ವಿಮಾ ಮೊತ್ತವು ಕ್ಲೇಮು ರಕ್ಷಕ ಸುರಕ್ಷೆಯಲ್ಲಿ ಸಿಗುವುದಿಲ್ಲ.

11. **ಹಣದುಬ್ಬರ ರಕ್ಷಕ:** ಹಣದುಬ್ಬರ ರಕ್ಷಕವನ್ನು ಮೂಲ ಪ್ಲಾನ್ನ ವಾರ್ಷಿಕ ವಿಮಾ ಮೊತ್ತವನ್ನು ಗ್ರಾಹಕ ದರ ಸೂಚಿ (ಸಿಪಿಐ)ಗೆ ಜೋಡಿಸುವ ಮೂಲಕ ಏರುತ್ತಿರುವ ಹಣದುಬ್ಬರದಿಂದ ವಿಮಾ ಮೊತ್ತವನ್ನು ರಕ್ಷಿಸುವ ಉದ್ದೇಶದಿಂದ ರಚಿಸಲಾಗಿದೆ.

    ಪ್ರತಿ ನವೀಕರಣದಲ್ಲಿ ಲಾಯಲ್ಟಿ ಆಧಾರದ ಮೇಲೆ ವಾರ್ಷಿಕ ವಿಮಾ ಮೊತ್ತವನ್ನು ಹಿಂದಿನ ವರ್ಷದ ಹಣದುಬ್ಬರ ದರದ ಆಧಾರದ ಮೇಲೆ ಏರಿಸಲಾಗುತ್ತದೆ. ಕೇಂದ್ರೀಯ ಅಂಕಿಅಂಶಗಳ ಸಂಸ್ಥೆ (ಸಿಎಸ್‌ಒ) ಪ್ರಕಟಿಸಿದ ಇಡೀ ಕ್ಯಾಲೆಂಡರ್ ವರ್ಷದ ಸರಾಸರಿ ಸಿಪಿಐ ಪರಿಗಣಿಸಿ ಹಣದುಬ್ಬರ ದರವನ್ನು ಲೆಕ್ಕ ಹಾಕಲಾಗುತ್ತದೆ.

    ಹೆಚ್ಚಳವಾಗುವ % ಕೇವಲ ಪಾಲಿಸಿಯ ವಾರ್ಷಿಕ ವಿಮಾ ಮೊತ್ತಕ್ಕೆ ಅನ್ವಯಿಸುತ್ತದೆ ಹಾಗೂ ಲಾಯಲ್ಟಿ ಬೋನಸ್/ ಪವರ್ ಬೂಸ್ಟರ್ ಅಥವಾ ವಿಮಾ ಮೊತ್ತ ಹೆಚ್ಚಿಸುವಂತಹ ಯಾವುದೇ ಇತರ ಸೌಲಭ್ಯಗಳಿಗೆ ಅನ್ವಯಿಸುವುದಿಲ್ಲ.

    ನವೀಕರಣದ ಸಮಯದಲ್ಲಿ ನೀವು ಈ ಐಚ್ಛಿಕ ಸುರಕ್ಷೆಯನ್ನು ರದ್ದುಗೊಳಿಸಲು ಬಯಸಿದರೆ, ಹಿಂದಿನ ಪಾಲಿಸಿಯ ಕಡೇ ದಿನಾಂಕದವರೆಗೆ ಹಣದುಬ್ಬರ ರಕ್ಷಕ ಸುರಕ್ಷೆಯಡಿ ಒಟ್ಟುಗೂಡಿದ ವಿಮಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಮಾದರಿ ವಿವರಣೆ**

| ವರ್ಷ | ವಾರ್ಷಿಕ ವಿಮಾ ಮೊತ್ತ | ಹಣದುಬ್ಬರ ರಕ್ಷಕವನ್ನು ಆರಿಸಲಾಗಿದೆ | ನವೀಕರಣ ಲೆಕ್ಕಾಚಾರದಲ್ಲಿ ಹಣದುಬ್ಬರ ರಕ್ಷಕ# | ಸಮಗ್ರ ಹಣದುಬ್ಬರ ರಕ್ಷಕ |
|---|---|---|---|---|
| 0 | ರೂ. 10,00,000 | ಹೌದು | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| 1 | ರೂ. 10,00,000 | ಹೌದು | ರೂ. 10,00,000 * 6% = 60,000 | ರೂ. 60,000 |
| 2## | ರೂ. 15,00,000 | ಹೌದು | ರೂ. 10,00,000 * 6% = 60,000 | ರೂ. 60,000 + ರೂ. 60,000 = ರೂ. 1,20,000 |
| 3 | ರೂ. 15,00,000 | ಹೌದು | ರೂ. 15,00,000 * 6% = 90,000 | ರೂ. 1,20,000 + Rs. 90,000 = ರೂ. 2,10,000 |
| 4 | ರೂ. 15,00,000 | ಇಲ್ಲ | ವಿಮಾದಾರ ಆಯ್ಕೆ ಮಾಡಿಕೊಳ್ಳದ ಕಾರಣ ಸೊನ್ನೆ | ಸೊನ್ನೆ |

\# ಹಿಂದಿನ ವರ್ಷದ ಗ್ರಾಹಕ ದರ ಸೂಚ್ಯಂಕ (ಸಿಪಿಐ)ನ್ನು ಶೇ.6 ಎಂದು ಪರಿಗಣಿಸಿದೆ

\## ವಿಮಾದಾರ ತನ್ನ ವಾರ್ಷಿಕ ವಿಮಾ ಮೊತ್ತವನ್ನು ರೂ.10 ಲಕ್ಷದಿಂದ ರೂ.15 ಲಕ್ಷಕ್ಕೆ ಏರಿಸಿದ್ದಾನೆ/ಳೆ.

12. **ಸ್ಥಳೀಯ ಹವಾ ಆಂಬ್ಯುಲೆನ್ಸ್ ಸುರಕ್ಷೆ:** ತುರ್ತು ನಿಗಾ ಪಡೆದುಕೊಳ್ಳುವ ಉದ್ದೇಶದಿಂದ ನಿಮ್ಮನ್ನು ಆರೋಗ್ಯ ಕಾಳಜಿ ಅಥವಾ ಹವಾ ಆಂಬ್ಯುಲೆನ್ಸ್ ಸೇವಾ ಪೂರೈಕೆದಾರ ಒದಗಿಸುವ ಹವಾ ಆಂಬ್ಯುಲೆನ್ಸ್ ಮೂಲಕ ಸಾಕಷ್ಟು ತುರ್ತು ಸೌಲಭ್ಯಗಳೊಂದಿಗೆ ಪಾಲಿಸಿಯ ಅವಧಿಯಲ್ಲಿ ಸಾಗಿಸಲು ಖರ್ಚಾದ ಹಣವನ್ನು ವಾರ್ಷಿಕ ವಿಮಾ ಮೊತ್ತದ ಮಟ್ಟಿಗೆ ನಾವು ಭರಿಸುತ್ತೇವೆ.

13. **ಚೇತರಿಕೆ ಸೌಲಭ್ಯ:** ನೀವು ನಿರಂತರ 10 ದಿನಗಳ ಕಾಲ ಆಸ್ಪತ್ರೆಗೆ ದಾಖಲಾಗಿದ್ದು ಅದರ ಕ್ಲೇಮು ನಮ್ಮಿಂದ ಸ್ವೀಕಾರವಾಗಿದ್ದಲ್ಲಿ ನಿಮಗೆ ರೂ.20,000 ನಿಗದಿತ ಭತ್ಯೆ ನೀಡುತ್ತೇವೆ. ಪಾಲಿಸಿ ವರ್ಷದಲ್ಲಿ ಒಂದು ಬಾರಿ ಈ ಸೌಲಭ್ಯ ಪಡೆಯಬಹುದು.

14. **ಗೃಹ ಶುಶ್ರೂಷೆ:** ಆಸ್ಪತ್ರೀಕರಣದ ನಂತರ ಗರಿಷ್ಠ 10 ನಿರಂತರ ದಿನಗಳ ಕಾಲ ನುರಿತ ಶುಶ್ರೂಷಕರಿಂದ ನಿಮ್ಮ ಮನೆಯಲ್ಲಿ ವೈದ್ಯಕೀಯ ಸೇವೆ ಪಡೆಯಲು ದಿನಕ್ಕೆ ರೂ.2,000ದವರೆಗೆ ನಾವು ಪಾವತಿಸುತ್ತೇವೆ. ಪಾಲಿಸಿಯ ಐಒಳರೋಗಿ ಚಿಕಿತ್ಸೆ ಐ ವಿಭಾಗದಡಿ ನಾವು ನಮ್ಮ ಹೊಣೆಯನ್ನು ಒಪ್ಪಿದ್ದರೆ ಮಾತ್ರ ಈ ಐಚ್ಛಿಕ ಸುರಕ್ಷೆಯಡಿ ಕ್ಲೇಮು ಪಾವತಿಗೆ ಅರ್ಹಗೊಳ್ಳುತ್ತದೆ.

15. **ಅನುಕಂಪದ ಭೇಟಿ:** ನೀವು 5 ದಿನಗಳಿಗೂ ಹೆಚ್ಚು ಕಾಲ ಆಸ್ಪತ್ರೀಕರಣಗೊಂಡಿದ್ದರೆ, ನಿಮ್ಮ ಮೂಲ/ವಾಸಸ್ಥಳದಿಂದ ನೀವು ಆಸ್ಪತ್ರೀಕರಣಗೊಂಡಿರುವ ಜಾಗಕ್ಕೆ ನಿಮ್ಮ ಕುಟುಂಬದ ಸದಸ್ಯ ಪ್ರಯಾಣಿಸಲು ಹಾಗೂ ಹಿಂದಿರುಗಲು ವೆಚ್ಚವಾದ ಎಕಾನಮಿ ಕ್ಲಾಸ್ ವಿಮಾನ ಟಿಕೆಟ್/ ರೈಲ್ವೇ ಟಿಕೆಟ್‌ನ ಖರ್ಚನ್ನು ನಾವು ಮರುಪಾವತಿಸುತ್ತೇವೆ. ಈ ಸುರಕ್ಷೆಯು ಒಂದು ಪಾಲಿಸಿ ವರ್ಷಕ್ಕೆ ರೂ. 20,000 ಗರಿಷ್ಠ ಮಿತಿಗೆ ಒಳಪಟ್ಟಿದೆ.

16. **ಆರೋಗ್ಯ ತಪಾಸಣೆ:** 18 ವರ್ಷ ಹಾಗೂ ಮೇಲ್ಪಟ್ಟ ವಯಸ್ಸಿನ ವಿಮಾದಾರ(ರು) ಪಾಲಿಸಿ ಅವಧಿಯಲ್ಲಿ ನಮ್ಮ ಸಂಪರ್ಕಜಾಲ ಪೂರೈಕೆದಾರ/ ತಜ್ಞರ ತಂಡದ ಸೇವಾ ಪೂರೈಕೆದಾರರಿಂದ ನಗದುರಹಿತ ರೀತಿಯಲ್ಲಿ ಈ ಕೆಳಗಿನ ಷರತ್ತುಗಳ ಅನ್ವಯ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬಹುದು

    i. ವಾರ್ಷಿಕ ವಿಮಾ ಮೊತ್ತದ ಶೇ.0.5ರಿಂದ ಗರಿಷ್ಠ ರೂ.5,000ದವರೆಗೆ ಸುರಕ್ಷೆ ಸಿಗುತ್ತದೆ

    ii. ಈ ಸುರಕ್ಷೆಯನ್ನು ಮುಂಚಿತವಾಗಿ ರಚಿಸಿದ ಆರೋಗ್ಯ ಪ್ಯಾಕೇಜ್‌ಗಳ ಮೂಲಕ ವಿಮಾ ಮೊತ್ತದ ಅರ್ಹತೆಯ ಮೇರೆಗೆ ಪಡೆದುಕೊಳ್ಳಬಹುದು. ಈ ಪ್ಯಾಕೇಜ್‌ಗಳನ್ನು ವಿಮಾದಾರ(ರು) ಬದಲಾಯಿಸಲು ಅವಕಾಶವಿಲ್ಲ.

    iii. ಮೊದಲ ಬಾರಿಗೆ ಪಾಲಿಸಿ ನೀಡುವಾಗ ಪಾಲಿಸಿ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಒಬ್ಬ ವಯಸ್ಕ ಪಾಲಿಸಿ ವರ್ಷದಲ್ಲಿ ಒಮ್ಮೆ ಆರೋಗ್ಯ ತಪಾಸಣೆ ಸೌಕರ್ಯವನ್ನು ಪಡೆದುಕೊಳ್ಳಬಹುದು.

    iv. ಮುಂಚಿತವಾಗಿ ರಚಿಸಲಾದ ಆರೋಗ್ಯ ತಪಾಸಣೆಯನ್ನು ಯಾವುದೇ ಪೂರ್ವ ಸೂಚನೆ ಇಲ್ಲದೆ ಕಾಲ ಕಾಲಕ್ಕೆ ಬದಲಾಯಿಸಬಹುದು, ಆದರೆ ವಿಮಾ ಮೊತ್ತದ ಅರ್ಹತೆ ಬದಲಾಯಿಸಲಾಗುವುದಿಲ್ಲ

    v. ಈ ಸುರಕ್ಷೆಯನ್ನು ನಮ್ಮ ಮೊಬೈಲ್ ಅಪ್ಲಿಕೇಷನ್ ಮೂಲಕ ಅಥವಾ ನಮ್ಮ ಶುಲ್ಕರಹಿತ ಸಂಖ್ಯೆ 1800 2666ಗೆ ಕರೆ ಮಾಡುವ ಮೂಲಕ ಪಡೆದುಕೊಳ್ಳಬಹುದು

    vi. ಈ ಸುರಕ್ಷೆಯಡಿ ವಿಮಾದಾರನಿದ ಆರೋಗ್ಯ ತಪಾಸಣೆಯ ಕೋರಿಗೆ ಸಲ್ಲಿಕೆಯಾದ ಬಳಿಕ ಸಂಪರ್ಕಜಾಲ ಪೂರೈಕೆದಾರ/ ಆರೋಗ್ಯ ಸೇವಾ ಪೂರೈಕೆದಾರರನ್ನು ನೇಮಿಸಬೇಕು.

    vii. ಈ ಆರೋಗ್ಯ ತಪಾಸಣೆ ಸೌಲಭ್ಯವನ್ನು ಪಡೆದುಕೊಳ್ಳುವುದರಿಂದ ವಾರ್ಷಿಕ ವಿಮಾ ಮೊತ್ತದ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ

    viii. ಬಳಕೆಯಾಗದ ಆರೋಗ್ಯ ತಪಾಸಣೆ ಪ್ಯಾಕೇಜ್‌ಅನ್ನು ನಂತರದ ಪಾಲಿಸಿ ವರ್ಷಕ್ಕೆ ಸೇರಿಸಲಾಗುವುದಿಲ್ಲ ಹಾಗೂ ಇದನ್ನು ನಿಗದಿತ ಸಮಯಾವಕಾಶದೊಳಗೆ ಬಳಸುವುದು ವಿಮಾದಾರನ ಇಚ್ಛೆ ಹಾಗೂ ಜವಾಬ್ದಾರಿ. ಈ ಬಗ್ಗೆ ನಾವು ಯಾವುದೇ ಜ್ಞಾಪನೆಗಳು ಅಥವಾ ಸೂಚನೆಗಳನ್ನು ನೀಡಲು ಬದ್ಧರಲ್ಲ.

    ದೀರ್ಘಕಾಲದ ಪಾಲಿಸಿಗಳ (2 ವರ್ಷ ಅಥವಾ 3 ವರ್ಷ) ಪಕ್ಷದಲ್ಲಿ, ವಯಸ್ಕ ವಿಮಾದಾರ(ರು) ಒಂದು ಪಾಲಿಸಿ ವರ್ಷಕ್ಕೆ ಒಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಅರ್ಹರಾಗಿರುತ್ತಾರೆ.

17. **ಆಪತ್ತಿನ ಅನಾರೋಗ್ಯ:** ನೀವು ಅಥವಾ ನಿಮ್ಮ ನಾಮಿನಿ ಅಥವಾ ಕಾನೂನುಬದ್ಧ ಉತ್ತರಾಧಿಕಾರಿ ಕೆಳಕಂಡ ಪಟ್ಟಿಯಲ್ಲಿ ನಮೂದಾಗಿರುವ ಯಾವುದೇ ಆಪತ್ತಿನ ಅನಾರೋಗ್ಯಕ್ಕೆ ತುತ್ತಾಗಿದ್ದು ಮೊದಲ ಬಾರಿಗೆ ಪತ್ತೆಯಾದಾಗ, ಪತ್ತೆಯಾದ 30 ದಿನಗಳೊಳಗೆ ಮಾಹಿತಿ ನೀಡಿದಲ್ಲಿ, ನಾವು ವಾರ್ಷಿಕ ವಿಮಾ ಮೊತ್ತದಷ್ಟು ಒಟ್ಟುಮೊತ್ತವನ್ನು ರೂ.50 ಲಕ್ಷದ ಗರಿಷ್ಠ ಮಿತಿಯೊಂದಿಗೆ ನೀಡುತ್ತೇವೆ. ನಮ್ಮ ಮೊದಲ ಪಾಲಿಸಿ ಆರಂಭವಾದ ದಿನದಿಂದ 90 ದಿನಗಳ ಒಳಗೆ ನೀವು ಈ ರೀತಿ ಯಾವುದೇ ಆಪತ್ತಿನ ಅನಾರೋಗ್ಯಕ್ಕೆ ಒಳಗಾಗಿರುವುದು ಪತ್ತೆಯಾದಲ್ಲಿ, ಅದಕ್ಕೆ ಸಂಬಂಧಿತ ಯಾವುದೇ ಕ್ಲೇಮುಗಳನ್ನು ಪಾವತಿಸಲಾಗುವುದಿಲ್ಲ. ಗರಿಷ್ಠ 50 ವರ್ಷದವರೆಗಿನ ವಯಸ್ಕ ವಿಮಾದಾರರಿಗೆ ಮಾತ್ರ ಈ ಸುರಕ್ಷೆ ಪಾಲಿಸಿ ಮೊದಲ ಬಾರಿಗೆ ಪಡೆದಾಗ ಸಿಗುತ್ತದೆ. ನಿಮ್ಮ ಜೀವಿತಾವಧಿಯಲ್ಲಿ ಕೇವಲ ಒಂದು ಬಾರಿ ಈ ಸುರಕ್ಷೆಯನ್ನು ಬಳಸಲು ಸಾಧ್ಯ. ಒಮ್ಮೆ ಈ ಸುರಕ್ಷೆಯಡಿ ಕ್ಲೇಮು ಪಾವತಿಗೆ ಒಪ್ಪಿತವಾದಲ್ಲಿ, ತದನಂತರ ಈ ಸುರಕ್ಷೆಯಡಿ ಯಾವುದೇ ಪ್ರಯೋಜನಗಳನ್ನು ನೀಡಲಾಗುವುದಿಲ್ಲ.

    ಈ ಪಾಲಿಸಿಯ ಉದ್ದೇಶಕ್ಕೆ "ಆಪತ್ತಿನ ಅನಾರೋಗ್ಯ" ಎಂಬುದು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತದೆ:

    1. ನಿರ್ದಿಷ್ಟ ತೀವ್ರತೆಯ ಕ್ಯಾನ್ಸರ್
    2. ಮಯೋಕಾರ್ಡಿಯಲ್ ಇನ್ಫ್ಲೇಷನ್ (ನಿರ್ದಿಷ್ಟ ತೀವ್ರತೆಯ ಮೊದಲ ಹೃದಯಾಘಾತ)
    3. ಪರಿಧಮನಿಯ ಅಪಧಮನಿ ಕಾಯಿಲೆ
    4. ಓಪನ್ ಚೆಸ್ಟ್ ಸಿಎಬಿಜಿ
    5. ತೆರೆದ ಹೃದಯ ಬದಲಿ ಅಥವಾ ಹೃದಯ ಕವಾಟಗಳ ದುರಸ್ತಿ
    6. ಮಹಾಪಧಮನಿಯ ಶಸ್ತ್ರಚಿಕಿತ್ಸೆ
    7. ಶಾಶ್ವತವಾದ ಪಾರ್ಶ್ವವಾಯು
    8. ನಿಯಮಿತ ಡಯಾಲಿಸಿಸ್ ಬೇಡುವ ಮೂತ್ರಪಿಂಡ ವೈಫಲ್ಯ
    9. ಅಪ್ಲಾಸ್ಟಿಕ್ ರಕ್ತಹೀನತೆ
    10. ಕೊನೆ ಹಂತದ ಶ್ವಾಸಕೋಶದ ಕಾಯಿಲೆ
    11. ಕೊನೆ ಹಂತದ ಯಕೃತ್ ವೈಫಲ್ಯ
    12. ನಿರ್ದಿಷ್ಟ ತೀವ್ರತೆಯ ಕೋಮಾ
    13. ಮೂರನೇ ಹಂತದ ಸುಟ್ಟಗಾಯಗಳು
    14. ಗಂಭೀರ ಸ್ವರೂಪದ ಅಂಗ/ಅಸ್ಥಿಮಜ್ಜೆ ಕಸಿ
    15. ನಿರಂತರ ರೋಗಲಕ್ಷಣ ಹೊಂದಿರುವ ಮಲ್ಟಿಪಲ್ ಸ್ಕ್ಲೆರೋಸಿಸ್
    16. ಪೂರ್ಣಪ್ರಮಾಣದ ಯಕೃತ್ತಿನ ಉರಿಯೂತ
    17. ನಿರಂತರ ರೋಗಲಕ್ಷಣ ಹೊಂದಿರುವ ಓಡಾಟದ ನರಕೋಶ ಕಾಯಿಲೆ
    18. ಪ್ರಾಥಮಿಕ ಶ್ವಾಸಕೋಶದ ಅಧಿಕ ರಕ್ತದೊತ್ತಡ
    19. ಕೊನೆ ಹಂತದ ಅನಾರೋಗ್ಯ
    20. ಬ್ಯಾಕ್ಟೀರಿಯಲ್ ಮೆನಿಂಜೈಟಿಸ್

    ಹೆಚ್ಚಿನ ಮಾಹಿತಿಗಾಗಿ ಪಾಲಿಸಿಯನ್ನು ಓದಿರಿ

18. **ವೈಯಕ್ತಿಕ ಅಪಘಾತ:** ನೀವು ಅಥವಾ ನಿಮ್ಮ ನಾಮಿನಿ/ಕಾನೂನುಬದ್ಧ ಉತ್ತರಾಧಿಕಾರಿ, ಯಾರಿಗಾದರೂ ಪಾಲಿಸಿ ವರ್ಷದಲ್ಲಿ ಈ ಕೆಳಕಂಡ ವಿಮಾ ಘಟನೆ ನಡೆದಲ್ಲಿ, ಗರಿಷ್ಠ ರೂ.50 ಲಕ್ಷದವರೆಗೆ ವಾರ್ಷಿಕ ವಿಮಾ ಮೊತ್ತವನ್ನು ನಾವು ನೀಡುತ್ತೇವೆ. ಪಾಲಿಸಿ ಮೊದಲ ಬಾರಿ ಪಡೆದುಕೊಂಡ ಗರಿಷ್ಠ 65 ವರ್ಷ ಮೇಲ್ಪಟ್ಟ ವಿಮಾದಾರರಿಗೆ ಮಾತ್ರ ಈ ಸುರಕ್ಷೆ ಲಭ್ಯ.

19. **ಸ್ವಯಂಪ್ರೇರಿತ ಸಹ-ಪಾವತಿ:** ನೀವು ಪಾವತಿಸಬೇಕಾದ ಪ್ರೀಮಿಯಂ ಮೊತ್ತ ಇಳಿಕೆ ಮಾಡದಿರಲು ಸಹ–ಪಾವತಿ ಆಯ್ಕೆ ಮಾಡಿದ್ದಲ್ಲಿ, ಪಾಲಿಸಿ ಷೆಡ್ಯೂಲ್ನಲ್ಲಿ ತಿಳಿಸಿರುವಂತೆ ನಿಮ್ಮ ಪಾಲಿಸಿ ಸ್ವಯಂಪ್ರೇರಿತ ಸಹ–ಪಾವತಿಗೆ ಒಳಪಟ್ಟಿರುತ್ತದೆ ಹಾಗೂ ನೀವು ಪ್ರತಿ ಸ್ವೀಕಾರಾರ್ಹ ಕ್ಲೇಮಿನ ಸಮಯದಲ್ಲಿ ಈ ಸಹ–ಪಾವತಿಯ ನಿಗದಿತ ಶೇಕಡಾವಾರು ಭಾಗ ಪಾವತಿಗೆ ಬಾಧ್ಯರಾಗಿರುತ್ತೀರಿ. ಈ ಪಾಲಿಸಿಯ ಯಾವುದೇ ಇತರ ಸಹ–ಪಾವತಿಯ ಜೊತೆಗೆ ಈ ಸಹ–ಪಾವತಿಯೂ ಅನ್ವಯಿಸುತ್ತದೆ. ಕ್ಷೇಮ ಕಾರ್ಯಕ್ರಮ ಹೊರತುಪಡಿಸಿ ಎಲ್ಲಾ ಮೂಲ ಸುರಕ್ಷೆಗಳಿಗೆ ಸ್ವಯಂಪ್ರೇರಿತ ಸಹ–ಪಾವತಿ ಅನ್ವಯಿಸುತ್ತದೆ. ಇದು ಐಚ್ಛಿಕ ಸುರಕ್ಷೆ 1. ಅಮಿತ ಕಾಳಜಿ ಹಾಗೂ ಐಚ್ಛಿಕ ಸುರಕ್ಷೆ 9. ವಿಶ್ವದಾದ್ಯಂತ ಸುರಕ್ಷೆ ಹೊರತುಪಡಿಸಿ ಬೇರೆ ಯಾವುದೇ ಆಡ್–ಆನ್/ ಐಚ್ಛಿಕ ಸುರಕ್ಷೆಗಳಿಗೆ ಅನ್ವಯಿಸುವುದಿಲ್ಲ. ಸ್ವಯಂಪ್ರೇರಿತ ಡಿಡಕ್ಟಬಲ್‌ನ್ನು ಆರಿಸಿಕೊಂಡಿದ್ದರೆ ಸಹ ಸ್ವಯಂಪ್ರೇರಿತ ಸಹ–ಪಾವತಿ ಅನ್ವಯಿಸುವುದಿಲ್ಲ.

20. **ಸ್ವಯಂಪ್ರೇರಿತ ಡಿಡಕ್ಟಬಲ್:** ನೀವು ಸ್ವಯಂಪ್ರೇರಿತ ಡಿಡಕ್ಟಬಲ್ ಆಯ್ಕೆ ಮಾಡಿಕೊಳ್ಳುವ ಮೂಲಕ ನಂತರದ ಪ್ರೀಮಿಯಂ ಮೇಲೆ ರಿಯಾಯಿತಿ ಪಡೆಯುವ ಅವಕಾಶ ಹೊಂದಿದ್ದೀರಿ. ಪಾಲಿಸಿ ಷೆಡ್ಯೂಲ್ನಲ್ಲಿ ತಿಳಿಸಿರುವಂತೆ ನೀವು ಸ್ವಯಂಪ್ರೇರಿತ ಡಿಡಕ್ಟಬಲ್‌ನ್ನು ಆರಿಸಿಕೊಂಡಿದ್ದಲ್ಲಿ, ನೀವು ನಿಗದಿತ ಡಿಡಕ್ಟಬಲ್ ಮೊತ್ತವನ್ನು ಪಾವತಿಸಬೇಕು.

    i. ಒಂದು ಪಾಲಿಸಿ ವರ್ಷದಲ್ಲಿ ಮೂಲ ಸುರಕ್ಷೆಯಡಿ ಬರುವ ಎಲ್ಲಾ ಆಸ್ಪತ್ರೀಕರಣ ವೆಚ್ಚಗಳಿಗೆ ಒಟ್ಟಾರೆಯಾಗಿ ಸ್ವಯಂಪ್ರೇರಿತ ಡಿಡಕ್ಟಬಲ್ ಅನ್ವಯಿಸುತ್ತದೆ
    ii. ವೈಯಕ್ತಿಕ ಪಾಲಿಸಿಗೆ ವೈಯಕ್ತಿಕ ಆಧಾರದಲ್ಲಿ ಹಾಗೂ ಫ್ಲೋಟರ್ ಪಾಲಿಸಿಗೆ ಫ್ಲೋಟರ್ ಆಧಾರದಲ್ಲಿ ಡಿಡಕ್ಟಬಲ್ ಅನ್ವಯಿಸುತ್ತದೆ.
    iii. ಒಮ್ಮೆ ಆಯ್ಕೆ ಮಾಡಿಕೊಂಡ ನಂತರ ಮಧ್ಯ ಅವಧಿಯಲ್ಲಿ ಸ್ವಯಂಪ್ರೇರಿತ ಡಿಡಕ್ಟಬಲ್ನ್ನು ಬದಲಾಯಿಸಲಾಗುವುದಿಲ್ಲ. ನವೀಕರಣದ ಸಮಯದಲ್ಲಿ ಮಾತ್ರ ಮೌಲ್ಯಕಡಿತಕ್ಕೆ ಒಳಪಟ್ಟು ಡಿಡಕ್ಟಬಲ್‌ನ್ನು ಬದಲಾಯಿಸಬಹುದು.
    iv. ವಿಮಾದಾರ(ರು) ಸ್ವಯಂಪ್ರೇರಿತ ಡಿಡಕ್ಟಬಲ್‌ನ್ನು ಆಯ್ಕೆ ಮಾಡಿದಲ್ಲಿ, ಕ್ಷೇಮ ಕಾರ್ಯಕ್ರಮ ಹೊರತುಪಡಿಸಿ ಪಾಲಿಸಿಯ ಎಲ್ಲಾ ಮೂಲ ಸುರಕ್ಷೆಗಳಿಗೆ ಅನ್ವಯಿಸುತ್ತದೆ.
    v. ಸ್ವಯಂಪ್ರೇರಿತ ಸಹ–ಪಾವತಿ ಆಯ್ಕೆ ಮಾಡಿದ್ದಲ್ಲಿ ಸ್ವಯಂಪ್ರೇರಿತ ಡಿಡಕ್ಟಬಲ್ನ್ನು ಆಯ್ಕೆ ಮಾಡಲು ಅವಕಾಶವಿಲ್ಲ

21. **ಅವಲಂಬಿತರ ವಾಸ್ತವ್ಯ ಅನುಕೂಲ:** ಪಾಲಿಸಿ ಅವಧಿಯಲ್ಲಿ ನೀವು ಅಪಘಾತದ ಕಾರಣದಿಂದ ಅನಾರೋಗ್ಯಕ್ಕೀಡಾದಲ್ಲಿ ಅಥವಾ ಗಾಯಗೊಂಡು ಆಸ್ಪತ್ರೆಗೆ ದಾಖಲಾದಲ್ಲಿ, ದಿನಕ್ಕೆ ರೂ.1,000ದವರೆಗೆ ನಾವು ಅವಲಂಬಿತರ ವಾಸ್ತವ್ಯದ ವೆಚ್ಚವಾಗಿ ನೀಡುತ್ತೇವೆ. ಕನಿಷ್ಠ 3 ನಿರಂತರ ದಿನಗಳಿಂದ ಗರಿಷ್ಠ 10 ದಿನಗಳವರೆಗೆ ಆಸ್ಪತ್ರೆಯಲ್ಲಿ ಇರುವಂತೆ ವೈದ್ಯರ ಸಲಹೆ ಇರಬೇಕು.

22. **ದೀರ್ಘಕಾಲದ ವೈದ್ಯಕೀಯ ಸಲಕರಣೆ ಸುರಕ್ಷೆ:** ಪಟ್ಟಿಯಲ್ಲಿರುವ ಯಾವುದೇ ದೀರ್ಘಕಾಲದ ವೈದ್ಯಕೀಯ ಸಲಕರಣೆಗಳ ಖರೀದಿ ಅಥವಾ ಬಾಡಿಗೆಗೆ ಪಡೆಯಬೇಕಾದ ಅಗತ್ಯ ಬಂದಲ್ಲಿ, ಆ ವೆಚ್ಚವನ್ನು ವಾರ್ಷಿಕ ವಿಮಾ ಮೊತ್ತದಷ್ಟು ರೂ.5 ಲಕ್ಷಗಳ ಗರಿಷ್ಠ ಮಿತಿಯೊಂದಿಗೆ (ಸಮಗ್ರ ಮೂಲ ವಿಮಾ ಮೊತ್ತದೊಳಗೆ) ನಾವು ಭರಿಸುತ್ತೇವೆ. ಆಸ್ಪತ್ರೀಕರಣದ ನಂತರ ವೈದ್ಯಕೀಯ ಸಲಕರಣೆಯ ಬಳಕೆಯನ್ನು ವೈದ್ಯರು ಶಿಫಾರಸು ಮಾಡಿರಬೇಕು ಹಾಗೂ ಆಸ್ಪತ್ರೀಕರಣದ ಕ್ಲೇಮು ಸ್ವೀಕಾರಾರ್ಹವಾದ ಕಾರಣ ಹಾಗೂ ಸಲಕರಣೆ ಬಳಕೆಯ ಕಾರಣ ಒಂದೇ ಆಗಿರಬೇಕು.

    ಈ ಐಚ್ಛಿಕ ಸುರಕ್ಷೆಯಡಿ ಬರುವ ದೀರ್ಘಕಾಲದ ವೈದ್ಯಕೀಯ ಸಲಕರಣೆಗಳ ಪಟ್ಟಿ–

    1. ಸಿಪಿಎಪಿ ಯಂತ್ರ
    2. ವೆಂಟಿಲೇಟರ್
    3. ಗಾಲಿಕುರ್ಚಿ
    4. ಕೃತಕ ಅಂಗಾಂಗ ಸಾಧನ
    5. ಹೀರುವಿಕೆ ಯಂತ್ರ
    6. ಕಮೋಡ್ ಕುರ್ಚಿಗಳು
    7. ದ್ರಾವಣ ಪಂಪ್

8. ಮಂಡಿ ಬದಲಿ ಜೋಡಣೆಯಾಗಿದ್ದಲ್ಲಿ ನಿರಂತರ ಪರೋಕ್ಷ ಓಡಾಟದ ಸಾಧನ

9. ಆಮ್ಲಜನಕ ಸಾಂದ್ರಕ

23. **ಟೆಲಿ-ಸಮಾಲೋಚನೆ(ಗಳು):** ನಿಯಮಿತ ಆರೋಗ್ಯ ಸಮಸ್ಯೆಗಳಿಗೆ ನುರಿತ ವೈದ್ಯರೊಂದಿಗೆ ಸಮಾಲೋಚನೆ ಏರ್ಪಡಿಸಿ, ಅವರಿಂದ ಸಲಹೆ ಪಡೆಯಲು ನೆರವು ನೀಡುತ್ತೇವೆ. ಈ ಐಚ್ಛಿಕ ಸುರಕ್ಷೆಯ ಮಿತಿಯೊಳಗೆ, ಟೆಲಿ ಸಮಾಲೋಚನೆ ಎಂದರೆ ವಿವಿಧ ಸಂವಹನ ರೀತಿಗಳಾದ ಶ್ರವ್ಯ, ದೃಶ್ಯ, ಆನ್‌ಲೈನ್, ಚಾಟ್ ಅಥವಾ ಮೊಬೈಲ್ ಅಪ್ಲಿಕೇಷನ್ ಮೂಲಕ ವೈದ್ಯರ ಸಮಾಲೋಚನೆ ಪಡೆಯುವುದು. ಈ ಕುರಿತಾದ ಹೆಚ್ಚಿನ ವಿವರಗಳಿಗೆ ನಮ್ಮ ಮೊಬೈಲ್ ಅಪ್ಲಿಕೇಷನ್ ನೋಡಿರಿ. ಒಂದು ಪಾಲಿಸಿ ವರ್ಷದಲ್ಲಿ ಪಡೆಯಬಹುದಾದ ಟೆಲಿ-ಸಮಾಲೋಚನೆಗಳಿಗೆ ಯಾವುದೇ ಗರಿಷ್ಠ ಮಿತಿ ನಿಗದಿಗೊಳಿಸಿಲ್ಲ.

